ಅಪರಂಜಿ

ಸಂಪುಟ ೫
ಆಗಸ್ಟ್ ೧೯೮೮
ಸಂಚಿಕೆ ೧೧

ತಿಳಿನಗೆಯ ಕಾರಂಜಿ



- ☐ ಆನಂದ್
- ☐ ಶಿವರಾಮ ಕಾರಂತ
- ☐ ಅಮಲಕ
- ☐ ಶಿವು
- ☐ ಎಚ್. ಡುಂಡಿರಾಜ್
- ☐ ಕಮಲಾ ರಾಮಸ್ವಾಮಿ
- ☐ ಟೀಯೆಸ್ಸಾರಾವ್
- ☐ ಸೇವ ನಮಿರಾಜಮಲ್ಲ
- ☐ ವಿಕಟಕವಿ
- ☐ ಲೋಕನಾಥ ದೀಕ್ಷಿತ್

ಬಿಡಿಪ್ರತಿ : ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೫ | ಆಗಸ್ಟ್ ೧೯೮೮ | ಸಂಚಿಕೆ ೧೧

ಚಂದಾ ವಿವರ :

ಬಿಡಿ ಪ್ರತಿ
ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ 150 ರೂ.
ಪೋಷಕರು 500 ರೂ.

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ವಿಳಾಸ :
ಅಪರಂಜಿ ಕಾರ್ಯಾಲಯ
119 [ಹಳೆಯ 36]
6ನೆ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560003

ಸಂಪಾದಕ :
ಶಿವಕುಮಾರ್

ಪುರೋಹಿತರ ಪ್ರಲಾಪ

ಕೋಲಾಹಲಗೈದು ರಂಪವೆಬ್ಬಿಸುತ್ತಿರುವ ಪುಟಾಣಿ ಪೋರರಿರಾ, ನೀವು ಕಂಡಿರಾ ? ನೀವು ಕಂಡಿರಾ ? ಮಯೂರ ಕಂಠದಿಂ ಕಲಕಲಿಸುತಿರುವ ಲಲನಾಮಣಿಗಳಿರಾ, ನೀವು ಕಂಡಿರಾ ? ನೀವು ಕಂಡಿರಾ ? ಛೋ, ನಾಣಿ ವೆಂಕ ಶೀನರಿರಾ. ಪಾರುಪತ್ತೆಗಾರರಿರಾ, ನೀವು ಕಂಡಿರಾ ? ನೀವು ಕಂಡಿರಾ ? ನೀವಾದರೂ. ಕೊಂಚ ನೀವಾದರೂ ಹಾಳು ನಶ್ಯದ ಡಬ್ಬಿ ಎಲ್ಲಿಹುದೆಂದು ಕೊಂಚ ಹುಡುಕಿರಪ್ಪಾ, ಓ ಮುದುಮಕ್ಕಳಿರಾ ಕೊಂಚ ಹುಡುಕಿರಪ್ಪಾ.

ರಾಮಕೃಷ್ಣ

ಈ ಸಂಚಿಕೆಯಲ್ಲಿ......

ವ್ಯಂಗ್ಯ ಚಿತ್ರಗಳು : ಬಾಗೂರು ಮಾರ್ಕಾಂಡೇಯ, ಅಶ್ವಥ್.

ಮುದ್ರಣ : ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ,
ಬೆಂಗಳೂರು–3. ದೂರವಾಣಿ : 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೫ ಆಗಸ್ಟ್ ೧೯೮೮ ಸಂಚಿಕೆ ೧೧

ಆ ಔಪನಿಷದ ಪುರುಷನನ್ನು ಕೇಳುತ್ತಿದ್ದೇವೆ.

—**ಬೃಹದಾರಣ್ಯಕ.**

ಉಪನಿಷತ್ತುಗಳು ಹೇಳಿರುವ ಬ್ರಹ್ಮಸ್ವರೂಪವನ್ನೇ ಅನುಭವಕ್ಕೆ ತಂದುಕೊಳ್ಳುವ ಇಚ್ಛೆಯುಳ್ಳ ಜಿಜ್ಞಾಸುವು ಹೇಳಿದ ಮಾತಿದು.

ಈ ಲೋಕದಲ್ಲೂ ನಾವೊಬ್ಬ ಪುರುಷನನ್ನು ಅರಸುತ್ತಿದ್ದೇವೆ. ಅವನು ಪ್ರಗತಿ ಇತ್ಯಾದಿಗಳ ಮಾತನ್ನಾಡಬಾರದು; ಸಾಧಿಸಬೇಕು. ಸಮಸ್ಯೆಗಳನ್ನು ಹುಟ್ಟುಹಾಕಿ. ಎಡಗೈಯಿಂದ ಮಗುವನ್ನು ಜಿಗುಟಿ ಬಲಗೈಯಿಂದ ತೂಗುವವನಾಗಬಾರದು. ಭ್ರಷ್ಟಾಚಾರವು ವಿಶ್ವವ್ಯಾಪಿಯಾಗಿದ್ದರೂ ಅದರಲ್ಲಿ ಪಾಲುದಾರನಾಗಿರಬಾರದು. ಭಾರತೀಯ ತತ್ವಗಳನ್ನು ಕೊಲ್ಲುವ ನಕಲೀ, ತತ್ವಗಳನ್ನು ಊದಬಾರದು. ಔಪನಿಷದ ಜ್ಞಾನವನ್ನು ಮರೆತು ಪುಸ್ತಕದ ಬದನೆಕಾಯಿ ತಿಂದ ಹೆರರು. ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಬರೆದ ಬಣ್ಣದ ಮಾತುಗಳನ್ನು ಪುನರುಚ್ಚರಿಸುವವನಾಗಬಾರದು. ಪಾಶ್ಚಾತ್ಯ ದೇಶಗಳು ಮುಳುಗುತ್ತಿರುವ ಸ್ವೇಚ್ಛಾಚಾರ, ವಿದ್ರೋಹ, ಭಯ, ಕ್ರೌರ್ಯಗಳ ಸರೋವರಕ್ಕೆ ಜನತೆಯನ್ನು ತಳ್ಳುವವನಾಗಿರಬಾರದು. ದ್ವೇಷಿಗಳನ್ನು ಮಿತ್ರರೆಂದು ಭಾವಿಸುವವನಾಗಿರಬಾರದು. ಪ್ರತಿದಿನವೂ ಕರೆಗಳನ್ನು ನೀಡುತ್ತಾ, ದೃಢ ಸಂಕಲ್ಪಗಳನ್ನು ಪುನರುಚ್ಚರಿಸುತ್ತಾ, ಪ್ರಾಣ. ಧನ ಮಾನ ಹಾನಿಗಳು ವೃದ್ಧಿಯಾಗಲು ಬಿಡುವವನಾಗಬಾರದು. ಎಲೆಕ್ಷನ್ನಿಗಾಗಿ ಮನೆ, ಜನಪದಗಳನ್ನು ಛಿದ್ರ ಮಾಡುವವನಾಗಬಾರದು.

ಆ ಔಪನಿಷದ ಪುರುಷನು ಅಂತಹ ಅವತಾರವನ್ನೆತ್ತಿ ಬರುವನೋ ಹೇಗೋ, ಎಂದು ಕಾದು ಕಾದು ಕಂಗಾಲಾಗುವ ಪರಿಸ್ಥಿತಿ ಕೊನೆಗೊಳ್ಳಲಿ!

ಅಪರಂಜಿ ಕಿಡಿ

—ಆನಂದ್

(ಅಲಹಾಬಾದ್ ಚುನಾವಣೆಯ ನಂತರ)

ದಕ್ಷಿಣ ರಾಜ್ಯಗಳಲ್ಲಿ ಚುನಾವಣೆಗೆ ಕಾಂಗ್ರೆ ಸಿದ್ಧ.

—ಶ್ರೀ ರಾಜೀವ್ ಗಾಂಧಿ

ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ !

*   *   *   *

ಜನತಾ ಬಿಕ್ಕಟ್ಟು; ನಿವಾರಣೆ ಯತ್ನ ವಿಫಲ

—ಪತ್ರಿಕೆ

ಹಾವೂ ಸಾಯದು, ಕೋಲೂ ಮುರಿಯದು !

*   *   *   *

ಭಾರತದ ಆಟಗಾರರು ಉತ್ತಮವಾಗಿ ಆಡಿದರೂ, ಗೆಲ್ಲುವ ಉತ್ಕಟ ಇಚ್ಛೆ ಅವರಿಗಿಲ್ಲ.

—ವಿಜಯ್ ಅಮೃತ್‌ರಾಜ್

ಅನುಭವದ ಮಾತು !

*   *   *   *

ರಾಜ್ಯ ಸರ್ಕಾರದಿಂದ ಸುಳ್ಳು ಅಂಕಿ ಅಂಶ.

—ಪೂಜಾರಿ

ಕೇಂದ್ರದ ಹರಿಶ್ಚಂದ್ರರು ಇಲ್ಲಿಲ್ಲವಲ್ಲ ?

*   *   *   *

ಮೈಸೂರು ಮೃಗಾಲಯಕ್ಕೆ ಜಿರಾಫೆ ಜೋಡಿ.

– ಪತ್ರಿಕೆ

ಕತ್ತು ಹೀಗಿದ್ರೆ ಎಷ್ಟು ಹಾರ ಹಾಕಬಹುದು ಅಂತ ರಾಜಕಾರಣಿಗಳು ಅಚ್ಚರಿ ಪಟ್ಟರಂತೆ !

*   *   *   *

"ರೂಪಾಯಿಯ ಮುಖ ಭಂಗ"

"ನಿದ್ರೆ ನನಗೆ ದೇವರು ಕೊಟ್ಟ ವರ"

—ಕೇಂದ್ರ ಅರ್ಥ ಸಚಿವ ಚವಾಣ್

ದಿನ ಪತ್ರಿಕೆಯ ಪುಟದಲ್ಲಿ ಅಕ್ಕಪಕ್ಕದ ಸುದ್ದಿಗಳು !!

*   *   *   *

ವಿಧಾನ ಪರಿಷತ್ತಿನ ಚುನಾವಣೆ ಶಾಂತಿಯುತ.

—ಪತ್ರಿಕೆ

'ಶಾಂತಿಯುತ' ಚುನಾವಣೆ ಅನ್ನೋದು ಸುದ್ದಿ ಆಗೋ ದುರ್ದಿನ ಬಂತಲ್ಲ ಅಂತ ಅಪರಂಜಿ ಚಕಿತಗೊಂಡಳಂತೆ !

O   O   O   O

6

ಸೊಲೊಮನ್ ಗ್ರಂಡಿಯ ನೆರಳಿನಲ್ಲಿ

—ಶಿವರಾಮ ಕಾರಂತ

ವಾರಕೆ ಏಳೇ ಏಳು ದಿನ
ಸೋಮಪ್ಪನವನ ಬಾಳು ಘನ
ಸೋಮಪ್ಪ ಹುಟ್ಟಿದ್ದು ಸೋಮನ ವಾರ
ಮುಂಜಿ ಆದದ್ದು ಮಂಗಳ ವಾರ
ಮದುವೆ ಆದನು ಬುಧ ವಾರ
ಮಕ್ಕಳ ಪಡೆದನು ಗುರು...ವಾರ
ಬಂದಿತು ಮುಪ್ಪು ಶುಕ್ರನವಾರ
ಕಾಯಿಲೆ ಬಿದ್ದ ಶನಿವಾರ
ಚಟ್ಟ ಏರಿದ ಆದಿತ್ಯವಾರ
ವಾರಕೆ ಏಳೇ ಏಳು ದಿನ
ಬದುಕಲು ಸಾಕು—ಆರು ದಿನ
ಸಾಯಲಿ ಬೇಕು ಒಂದು ದಿನ

ವಕ್ರದೃಷ್ಟಿ

—ಆಮೆಲಕ

ಅಲಹಾಬಾದಿನಲ್ಲಿ ರಾಮಾವತಾರ–ಹನುಮಾವತಾರಗಳಾದರೂ ಗೆದ್ದದ್ದು "ರಾವಣನೇ:"

ಇದೇನು ವಿಪರೀತ ! ಅಂದರೆ ? "ದಡ್ಡರ ಡಬ್ಬೀಲಿ" ರಾಮನ್ನ–ನೋಡಿದ ಜನ–'ಓಟಿನ ಡಬ್ಬೀಲಿ' ಜಾಣತನ ತೋರಿಸಿದರೋ ?–"ಹಾಯ್ ಶ್ರೀ ರಾಮ್."

O O O O

ಉತ್ತರದಲ್ಲಿ ವೀರಭದ್ರರಿಗೆ ಎತ್ತಂಗಡಿ_ಮಹಾರಾಷ್ಟ್ರದಲ್ಲಿ ಚವ್ಹಾಣರಿಗೆ–'ಖೋ'–ತಮಿಳುನಾಡಿನಲ್ಲಿ–ಜಯಾ–ಜಾನಕಿಯರ ಬಣದ ನಡುವೆ–'ಕಪ್ಪೆ–ತಕ್ಕಡಿ' ಆಟ—ಕರ್ನಾಟಕದಲ್ಲಿ ಹೆಗಡೆ—ಗೌಡರ–"ಬೀದಿ ಜಗಳ"-ಕೇಂದ್ರದಲ್ಲಿ ಪುನಃ "ಬೋಫಾರ್ಸ್ ಬಿಸಿ"—ಹೊರಗಡೆ ರಷ್ಯಾದಲ್ಲಿ "ಧಿಡೀರ್ ಜ್ಞಾನೋದಯ"—ಅಮೆರಿಕಾ ಕ್ಷಿಪಣಿಯಿಂದ "ಇರಾನಿನ ಸಾರಿಗೆ ವಿಮಾನ ನೆಲಕ್ಕೆ"–ಇದೇನು ? ಕಳೆದ ತಿಂಗಳು?! ಕಕ್ಕಾಬಿಕ್ಕಿಯಾದ–ಈ ಕಾಲಮಿಷ್ಟನಿಗೆ–ದೃಷ್ಟಿ ಮಂಜಾಗಿ–ಕಾಲಮಿಗೇ ಕತ್ತರಿ !

O O O O

ಹಾಗೇನಿಲ್ಲ ! ನೈಜ ವಿದ್ಯಮಾನಗಳೇ ದಿನ ಪತ್ರಿಕೆಗಳಲ್ಲಿ ದಿನಕ್ಕೊಂದು ದಿಕ್ಕು ತಪ್ಪಿದ ಸುದ್ದಿಗಳನ್ನು ಕೊಟ್ಟು ಮನರಂಜನೆ ಒದಗಿಸುತ್ತಿರುವಾಗ How to read in between the lines ? ಎಲ್ಲವೂ line ತಪ್ಪಿದಾಗ!

O O O O

ಕೇಂದ್ರ ಸಂಪುಟ 25ನೇ ಬಾರಿ ಬದಲಾವಣೆ—

—ಬದಲಾವಣೆ ಪ್ರಗತಿಯ ಸಂಕೇತವೇ ?

ಅಂದರೆ ಮತ್ತೆ—Rolling stone ?

Rolling ಅಂದಾಗ ಜ್ಞಾಪಕಕ್ಕೆ ಬಂತು—25ನೇ ರೀಷಫಲ್‌ನಲ್ಲಿ—ಯಾವ ತಲೆಗಳೂ ಉರುಳದೇ—ರಾಜ್ಯದಿಂದ ಕೇಂದ್ರಕ್ಕೆ ಕೇಂದ್ರದಿಂದ ರಾಜ್ಯಕ್ಕೆ—ಹಾರಿದನು ಹನುಮಂತ ಲಂಕೆಗೆ ಅಂದ ಹಾಗೆ.

O O O O

ಕೇಂದ್ರದಲಿ ಸಲ್ಲದವರು ರಾಜ್ಯದಲಿ ಸಲ್ಲುವರಯ್ಯ
ರಾಜ್ಯದಲಿ ಸಲ್ಲದವರು ಕೇಂದ್ರದಲಿ ಸಲ್ಲುವರಯ್ಯ
ಕೇಂದ್ರ-ರಾಜ್ಯಗಳಲಿ ಆಗಾಗ ಸಲ್ಲುತ್ತಾ
ಅಲ್ಲಿಂ'ದಿಲ್ಲಿ'ಗೆ ಹಾರುತ್ತ ಎಲ್ಲೆಲ್ಲೂ ಸಲ್ಲುವರಯ್ಯ
—ಹರ-ಹರಾ ಮರ್ಕಟ ಮಾದೇಶ್ವರಾ !

O O O O

ಜನತಾ—ವಿಷಯ ಬರೆಯುವಾಗ—ದಿಗಿಲು ಆಗುತ್ತದೆ ಬರೆದ ಇಂಕು ಆರುವುದರೊಳಗೇ ಏನಾದರೂ ಹೊಸ ಸುದ್ದಿ ಮಾಡಿರ್ತಾರೆ ಜನತಾದ ಜನ.

O O O O

ಪರಿಷತ್ತು ಚುನಾವಣೆಗೆ ಮೊದಲು ಭಿನ್ನಮತೀಯರ ಮೇಲಾಟ—

ಚುನಾವಣೆಯ ನಂತರ ಹೆಗಡೆಯವರ ಜಾಣತನದ ಪಗಡೆಯಾಟ—

ಕರ್ನಾಟಕದ ಕಬಡಿಯಾಟದಲ್ಲಿ ಜನತಾ ಹೈಕಮ್ಯಾಂಡಿನ ಹೊಯ್ದಾಟ—

ಅಂತೂ ನಾಯಕರೆಂಬ ಈ ಜನರಿಂದ ನಮಗೆಲ್ಲಾ ಮನರಂಜನೆಯ 'ದೊಡ್ಡಾಟ'

O O O O

"ರೈಲ್ವೆ ಸ್ಟೇಷನ್ ಮಾಸ್ತರಿಗೆ ನಿದ್ರೆ ಇಲ್ಲ—ಸ್ಕೂಲ್ ಮಾಸ್ತರಿಗೆ ಬುದ್ಧಿ ಇಲ್ಲ"—ನಮ್ಮಜ್ಜಿಯ ಗಾದೆ.

ಈ ಮೇಷ್ಟ್ರುಗಳು-ಎಲ್ಲಾ ಬಿಟ್ಟು ಹೊತ್ತಲ್ಲದ ಹೊತ್ತಿನಲ್ಲಿ ಮಾಡೋದು ನೋಡಿದರೆ—ಗಾದೆ ನಿಜಾ ಎನಿಸುತ್ತೆ.

O O O O

ಅವರ 'ಕೂಗೇ' ಅವರಿಗೆ ಕೇಳಿಸ್ತಾ ಇಲ್ಲ ಇನ್ನೂ
ಇವರ ಕೂಗು ಅವರಿಗೆ ಕೇಳಿಸೋದು ಹೇಗೆ ?

O O O O

When to strike ? Where to strike? How to strike? Whom to strike ? ಎಂಬುದೇ 'strike' ಆಗದ ಇವರಿಗೆ ನಮ್ಮ ಕಾಮೆಂಟು ಪಾಪ! ಅಯ್ಯೋ ಪಾಪ !

O O O O


ಸಚಿವರಿಗೆ ಚೇರಿನ ಚಿಂತೆ
ಶಿಕ್ಷಕರಿಗೆ ವೇತನದ ಚಿಂತೆ
ಪಾಲಕರಿಗೆ ಬಾಲಕರ ಚಿಂತೆ

ಅಂತೂ—ಚಿಂತೆಯು ಪಂಜರದಿಂ
ಹೊರಗುಳಿದು—ಗಾಳಿ ಪಟದಂತೆ
ಎತ್ತಿಂದೆತ್ತೋ ಸೂತ್ರ ಹರಿದು
ಹಾರುತಿಹ ಬಾಲಕರ ಭವಿಷ್ಯ
ಆಗುವುದೇ 'ಧೂಳೀಪಟ' ?!

ತನಿಖೆ

ಮನೆಗೆ ಬರುತ್ತಲೆ
ಮಗಳು ಕೇಳುತ್ತಾಳೆ
ಎಲ್ಲಿ ಚಾಕ್ ಲೇಟು ?
ಮನೆಗೆ ಬರುತ್ತಲೆ
ಮಡದಿ ಕೇಳುತ್ತಾಳೆ
ಎನ್ರೀ ಯಾಕ್ ಲೇಟು ?

ಎಚ್. ಡುಂಡಿರಾಜ್



"ನಮ್ಮನ್ನ ಸೃಷ್ಟಿಮಾಡಿ ಅಳಿದು ಹೋದ ದೇವರುಗಳು ಇಷ್ಟು ಪೆದ್ದರು
ಅಂತ ತಿಳಿದಿರಲಿಲ್ಲ !"

ಮಿಡತೆಗಳ ಗುಣ ನಡತೆ

—ಎಚ್. ಡುಂಡಿರಾಜ್

ಮಿಡತೆಗಳನ್ನು ಖಂಡಿತಾ ನೀವೆಲ್ಲರೂ ನೋಡಿದ್ದೀರಿ
ಚಿಕ್ಕವರಿದ್ದಾಗ ಅವು ಫಕ್ಕನೆ ಮೈಮೇಲೆ ಹಾರಿ
ನಿಮ್ಮನ್ನೆ ಮಿಕಿ ಮಿಕಿ ಕಂಡಾಗ ಹೆದರಿ ಓಡಿದ್ದೀರಿ
ಧೈರ್ಯವಿದ್ದವರು ಕಡ್ಡಿ ಪೆಟ್ಟಿಗೆಯಲ್ಲಿ ಹಿಡಿದು
ಕೂಡಿ ಹಾಕಿ "ಆಹಾ ! ರೇಡಿಯೋ ನೋಡಿ" ಎಂದು ಆಡಿದ್ದೀರಿ
ಒಂದೊಂದೇ ಕಾಲುಗಳ ಕೀಳುತ್ತಾ ಮೋಜು ಮಾಡಿದ್ದೀರಿ
ದೊಡ್ಡವರಾದ ನೀವೀಗ ಆ ಎಲ್ಲ ಹುಡುಗಾಟಗಳನ್ನು ಮರೆತು
ಮಿಡತೆಯ ಗುಣನಡತೆಯ ಕುರಿತು ಚಿಂತಿಸುವುದೊಳಿತು.

ನಿಸರ್ಗ ಪ್ರಿಯರಿಗೆ ಸುಂದರವಾಗಿ ತೋರುವ ಈ ಕೀಟ
ಎಲೆ ಹಸುರು, ಕಡು ಹಸುರು, ಹಳದಿ ಕೆಲವೊಮ್ಮೆ ಕಂದು
ಬೂದಿ ಇತ್ಯಾದಿ ವಿವಿಧ ಬಣ್ಣಗಳಲ್ಲಿ ಕಾಣಿಸಿಕೊಳ್ಳುವುದು
ಹಸುರು ಪೈರಿನ ಜತೆ ಹಸುರು, ಒಣಗಿದ್ದರೆ ಕಂದು ಮಿಡತೆ
ಅವು ವರ್ಣವಿನ್ಯಾಸ ಪರಿಸರಕ್ಕೆ ಹೊಂದಿಕೊಂಡಿರುತ್ತೆ.
ಚುಕ್ಕೆ ಚುಕ್ಕೆ, ಪಟ್ಟೆ ಪಟ್ಟೆ ಸೂರ್ಯನ ಕುದುರೆ ಮೈಮಾಟ
ಮೋಹಕ ಭಂಗಿಗಳ ಪ್ರಣಯದಾಟ ಸೆರೆಹಿಡಿಯಲು
ಕಾಯುತ್ತಾರೆ ಛಾಯಾಗ್ರಾಹಕರು ಹಗಲಿರುಳು.

ಕ್ಷಣಾರ್ಧದಲ್ಲಿ ಫಸಲನ್ನು ಪೂರ್ತಿ ಧ್ವಂಸಗೊಳಿಸಲು
ಹೇಳಿ ಮಾಡಿಸಿದಂತಿವೆ ಮಿಡತೆಗಳ ದವಡೆ ಹಲ್ಲು
ದಾಳಿ ಮಾಡಿದರೆ ಮಿಡತೆ ಆಹಾರದ ಕೊರತೆ, ಬರಗಾಲ
ಉತ್ಪಾದನೆಯ ಅಂದಾಜು ಅಂಕಿ ಅಂಶಗಳು ಬುಡಮೇಲು
ಇಷ್ಟೇ ಅಲ್ಲ, ತಜ್ಞರ ಪ್ರಕಾರ ಎಷ್ಟೋ ಸಲ
ಪಂಚವಾರ್ಷಿಕ ಯೋಜನೆಗಳೇ ಆಗುತ್ತವೆ ವಿಫಲ
ಆಕರ್ಷಕವಾದ ಈ ಜೀವಿ ಅಪಾಯಕಾರಿಯೂ ಅಹುದು
ಹಸುರು ಬಣ್ಣದ ಮಿಡತೆಯೇ ಹಸುರಿಗೆ ಮಿತ್ತಾಗಬಹುದು.

ಮಿಡತೆಗಳ ಇನ್ನೊಂದು ವಿಶಿಷ್ಟ ನಡತೆಯೆಂದರೆ
॥ ಅವು ಸೀದಾ ನಡೆಯುವುದಿಲ್ಲ ; ಸದಾ ನೆಗೆಯುತ್ತವೆ
ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಮತ್ತಿಲ್ಲಿಗೆ, ಇಲ್ಲಿಂದ ಮತ್ತೆಲ್ಲಿಗೆ
ಆ ಗೆಲ್ಲಿಂದ ಈ ಗೆಲ್ಲಿಗೆ, ಈ ಗಿಲ್ಲಿಂದ ಇನ್ನೆಲ್ಲಿಗೆ ?
ಊಹಿಸುವುದೂ ಅಸಾಧ್ಯ ನಮಗೆ ನಿಮಗೆ
ಅಚ್ಚರಿಯಿಂದ ನೋಡುತ್ತಾ ಉದ್ಗರಿಸಬಹುದು ಹೀಗೆ
ಇಲ್ಲಾದರೇನು ? ಎಲ್ಲಾದರೇನು ? ಯಾವ ಗೆಲ್ಲಾದರೇನು
ಒಟ್ಟಾರೆ ಗೆಲ್ಲುವುದು, ಗಿಡಪೂರ್ತಿ ಮೆಲ್ಲುವುದು ಮುಖ್ಯ
ಆ ಮರ ಈ ಮರ ಜಿಗಿತ ಅಜರಾಮರ
ಗೊತ್ತುಂಟು ಮಿಡತೆಗೆ ಈ ನಿತ್ಯ ಸತ್ಯ
ಆ ಗಿಡ ಈ ಗಿಡ ಥೊಂ ಗಿಡ ತದಿ ಗಿಡ
॥ ಎಂಥ ಲಯ ಬದ್ಧ ಮಿಡತೆಗಳ ರುದ್ರನೃತ್ಯ.

ಏಕೀಕರಣ

ಭಾಷೆ–ಭಾಷೆಯ ಗೊಂದಲವು
ಪಡೆಯಿತು ಪರಿಹಾರ–
ಏಕೀಕರಣ;
A Key
ಕರಣ.

ಭಾಷೆ-ಭಾಷೆಯ ಗೊಂದಲವು
ಪಡೆಯಿತು ಪರಿವಾರ–
ಹಗರಣ, ಹರಣ;
ಏಕೆ ಈ
ಕರಣ ?

ಕೆ. ಜಿ. ಸತೀಶ್



"ನೀ ಹೀಂಗ ನೋಡಿದರೆ ನನ್ನ...ತಿರುಗಿ...ನಾ ಹೆಂಗ ನೋಡಲೇ...ನಿನ್ನ...?"

ನಂ ಕ್ಲಬ್ಬಿನಲ್ಲಿ

—ಆನಂದ್

ಸಂಜೆ ಕ್ಲಬ್ಬಿನಲ್ಲಿ ರೆಡ್ಡಿ ಸಿಕ್ಕಿದ. ಅದೂ ಇದೂ ಮಾತಾಡ್ತಾ, ಟಿ. ವಿ. ರಾಮಾಯಣದ ವಿಷಯ ಬಂತು. ರೇಗಿದ ರೆಡ್ಡಿ ಹೇಳಿದ. ನೋಡೋ, ಹಿಂದೆ ಒಂದಾನೊಂದು ಕಾಲದಲ್ಲಿ ಭಾನುವಾರ ಬೆಳಿಗ್ಗೆ ದೋಸೇನೋ ಪೂರಿ ಪಲ್ಯಾನೋ ಸಿಗೋದು ಬ್ರೇಕ್‌ಫಾಸ್ಟ್‌ಗೆ ! ಈಗ ನೋಡು, ದರಿದ್ರ ಬ್ರೆಡ್ ಕೊಟ್ಬಿಟ್ತಾಳೆ ನನ್ ಹೆಂಡ್ತಿ ! ರಾಮಾಯಣ ನೋಡುಕ್ಕೆ ಮುಂಚೆ ಸ್ನಾನಗೀನ ಎಲ್ಲ ಆಗ್ಬೇಕಲ್ಲ ! ಅವನ ಕಷ್ಟ ಕೇಳಿ, ಹೋಗ್ಲಿ ಬಿಡು ಅಂತ ಬೇರರ್‌ನ ಕರೆದೆ.

O O O O

ಹೋದ ವಾರ ಕ್ಲಬ್ಬಿನಲ್ಲಿ ಶಾಮಣ್ಣ ಸಿಕ್ಕಿದ. ಅವನು ವೃತ್ತಿಯಿಂದ ವೈದ್ಯ· ಅವನ ಅನುಭವ ಕೇಳಿ ಟೈಫಾಯ್ಡ್ ಅಂತ ರೋಗಿಯೊಬ್ಬರಿಗೆ ಚಿಕಿತ್ಸೆ ಮಾಡಿದ್ದ ನಂತೆ ಶಾಮು. ಅವರು ಗುಣಮುಖರಾದರು. ಪುನಹ ಕೆಲಸಕ್ಕೆ ಸೇರುವ ಮುನ್ನ ಮೆಡಿಕಲ್ ಸರ್ಟಿಫಿಕೇಟ್ ಬೇಕು ಅಂತ ಬಂದರು. ಖಾಯಿಲೆ ಶುರುವಾದ ದಿನ ಅವರಿಗೇ ಮರೆತು ಹೋಗಿತ್ತು. ಜ್ಞಾಪಿಸಿಕೊಳ್ಳಲು ಅವರು ಯತ್ನಿಸುತ್ತಿದ್ದ ಹಾಗೇ ಅವರ ಪತ್ನಿಉದ್ಗರಿಸಿದಳು, "ಅದೇರಿ ಅವತ್ತಿನ ದಿನವೇ ಟಿ. ವಿ. ಸ್ಟೇಷನ್ ಮೇಲೆ ದಾಳಿ ಆಗಿ ರಾಮಾಯಣ ಬರಲಿಲ್ಲವಲ್ಲ. ಅದೇ ದಿನ ನಿಮಗೆ ಜ್ವರ ಶುರುವಾದದ್ದು!" ಹೇಗಿದೆ ರಾಮಾಯಣದ ಮಹಿಮೆ ?

O O O O

ಹೋದ ವಾರ ಕ್ಲಬ್ಬಿನ ರೂಂ ಒಂದರಲ್ಲಿ ನಂಬಿಯಾರ್ ಕೂತಿದ್ದ, ಏನೋ ಬರೆಯುತ್ತ. ಏನು ಅದು ಅಂದೆ. ಲಿಸ್ಟ್ ಬರೀತಿದೀನಿ, ಇರು, ಗಲಾಟೆ ಮಾಡ ಬೇಡ ಅಂದ. ಏನೋ ಲಿಸ್ಟು ಅಂತ ಕೇಳಿದೆ. ಮಗುವಿಗೆ ಹೇಳೋ ತರಹ ನಿಧಾನವಾಗಿ ಹೇಳಿದ.—ನೋಡೋ, ಈ ರಾಮಾಯಣ ದೇಶದಲ್ಲೆಲ್ಲ ಹರಡಿದೆ ಟಿ. ವಿ. ಲಿ. ಈಗಲೇ ಇದರ ಪೂರಾ ಪ್ರಯೋಜನ ಪಡೀಬೇಕು ! ಈ ಸಾಮಗ್ರಿ ಗಳನ್ನೆಲ್ಲ ತಯಾರು ಮಾಡೋ ಏಜೆನ್ಸೀಸ್ ಮಾಡುವಾ ಅಂತಿದೀನಿ.

ಅವನ ಲಿಸ್ಟ್ ನೋಡಿದೆ.

ಒಂದು : ಆರು ವರ್ಷದ ಮಗುವಿನ ಎತ್ತರದ್ದೇ ಬಿಲ್ಲು, ಬಾಣ, ಚಿನ್ನಾರಿ ಹಾಕಿ ಅಲಂಕಾರ ಮಾಡಿರೋದು.

ಎರಡು : ರಾಮನ ಸ್ಟೈಲ್ ಪಾದುಕೆಗಳು. ಮರದ್ದು, ಹಾಗೂ ಹವಾಯ್ ಟೈಪ್ !

ಮೂರು : ದೀಪಿಕಾ ಎಂಬ ಹೆಸರಿನ ಬಿಳಿ ಹಾಗೂ ಕೇಸರಿ ಬಣ್ಣದ ಸೀರೆಗಳು !

ನಾಲ್ಕು : ರಾಮಾಯಣದ ಹಲವು (ಮುಖ್ಯ) ದೃಶ್ಯಗಳಿರುವ T–ಶರ್ಟು ಗಳು; ಎದೆ ಹಾಗೂ ಬೆನ್ನಿನ ಮೇಲೆ ದೃಶ್ಯಗಳಿರುವ ಸ್ಪೆಷಲ್ ಶರ್ಟುಗಳನ್ನು ಎಕ್ಸ್‌ಪೋರ್ಟ್‌ಗೆ ಪ್ರಯತ್ನಿಸಲಾಗುವುದು. ರಾವಣ, ಕುಂಭಕರ್ಣ, ಇತ್ಯಾದಿ ವ್ಯಕ್ತಿಗಳ ಚಿತ್ರಗಳನ್ನು ವರ್ಣ ಮಯವಾಗಿ ಮಾಡಿದಲ್ಲಿ, ಅಮೆರಿಕದ ರಾಕ್ ಸಂಗೀತಗಾರರು ಇವನ್ನು ಬಿಸಿ ದೋಸೆ (ಅಲ್ಲಿ pan cake) ಮಾದರಿ ಕೊಳ್ಳು ತ್ತಾರೆಂದು ನಮ್ಮ ಮಾರ್ಕೆಟಿಂಗ್ ತಜ್ಞರು ತಿಳಿಸಿದ್ದಾರೆ.

ಐದು ; ಅರುಣ್ ಗೋವಿಲ್ ಹಾಗೂ ದೀಪಿಕಾ ಅವರ ಆತ್ಮಚರಿತ್ರೆ ಬರೆಯಲು ಲೇಖಕರನ್ನ ಈಗಲೇ ನೇಮಿಸುವುದು. ಈ ಪುಸ್ತಕಗಳಲ್ಲಿ ಸ್ವಲ್ಪ ಮಸಾಲೆ ಹಾಕಿದರೆ, ಅವುಗಳಿಂದ ಅಪಾರ ಆದಾಯ ಖಚಿತ !

ನಂಬಿಯಾರ್‌ನನ್ನು ಅವನ ಲಿಸ್ಟ್ ತಯಾರಿಕೆಗೆ ಬಿಟ್ಟು ತೀರ್ಥಯಾತ್ರೆಗೆ ಹೊರಟೆ !

ಗೋ ೞ ಟಾ ಳ

—ಕಮಲಾ ರಾಮುಸ್ವಾಮಿ

"ಬನ್ನಿ, ಬನ್ನಿ. ನೀವು ಪಕ್ಕದ ಮನೇಗೆ ಬಂದಿರೋರಲ್ವೇ" ಸಂಭ್ರಮದಿಂದ ಬಾಗಿಲು ತೆರೆದೆ. ಒಳ್ಳೇ ಎತ್ತರ, ದೃಢವಾದ ಮೈ ಕಟ್ಟು, ದೊಡ್ಡ ಅಗಲ ಕುಂಕುಮ, ಲಕ್ಷಣವಾದ ಕರೀ ಧರ್ಮಾವರದ ಸೀರೆಯುಟ್ಟು, ರೈಲು ಚೊಂಬನ್ನು ಹಿಡಿದು, ಮುಗುಳ್ನಗುತ್ತಾ "ಮಂಚಿ ನೀಳ್ಳು ಕಾವಲ್ಲಿ" ಎಂದ್ರು.

"ಅಮ್ಮಾ, ಅವ್ರಿಗೆ ಕುಡಿಯೋ ನೀರು ಬೇಕಂತೆ" ಒಗೆದ ಸೀರೆ ಹಿಂಡುತ್ತಾ ಯಾರು ಬಂದರೆಂದು ನೋಡಲು ಹಿಂದೆಯೇ ಬಂದಿದ್ದ ನಿಂಗಿ ತರ್ಜುಮೆ ಮಾಡಿದ್ಳು. ನನಗೆ ತೆಲುಗು ಬಾರದು; ಆಕೆಗೆ ಕನ್ನಡ ತಿಳೀದು. ನೆರೆ–ಹೊರೆ ಅಲ್ವೆ ಸಂಜೆ ಇವರು ಮನೆಗೆ ಬಂದಾಗ ವರದಿ ಒಪ್ಪಿಸಿದೆ. "ಅಕ್ಕ-ಪಕ್ಕ ಹೊಂದ್ಕೊಂಡು ಹೋಗ್ಬೇಕು. "ದೊರೆ ಮುನಿದ್ರೂ ನೆರೆ ಮುನಿಬಾರ್ದು ಅಂತ ಗಾದೆ..." ಎಂದೆಲ್ಲಾ ಹೇಳಿದ್ರು.

ರಾತ್ರಿ ಹತ್ತು ಘಂಟೆ, ಶುರುವಾಯ್ತು ಪಕ್ಕದ ಮನೆ ಶುನಕದ ಕುಂಯ್ಗ್ಣೂ, ಕುಂಯ್ಗ್ಣೂ ಹೊಸ ಜಾಗ, ಅರಚಿ, ನರಳಿ, ಕೂಗಿ ಅತ್ತು ಗಲಾಟೆ ಮಾಡ್ತು. ಇವರೋ ಮಹಾ light sleeper. ನಿದ್ದೆ ಇಲ್ದೆ ಒದ್ದಾಡಿದ್ರು. ಎದ್ದವರೇ ಪಕ್ಕದ ಮನೆಯಾತನನ್ನು ಕಂಡು ನಾಯಿ ಕುನ್ನಿಯನ್ನು ಬೇರೆ ಕಡೆ ಕಟ್ಟಲು ಹೇಳಿ ಬಂದ್ರು. "ಆತನ ತಾಯಿ ಅಂತ ಕಾಣುತ್ತೆ, ಕಾಫಿ ಮಾಡಿ ಕೊಟ್ರು" ಅಂದ್ರು.

"ಇಲ್ಲಾರೀ. ಆಕೆ ಅಡ್ಗೆಗೆ ಇರೋ ಹೆಂಗ್ಸು. ಇವ್ರುಗಳು ಸಂಸಾರ ಶುರು ಮಾಡ್ದಾಗಿನಿಂದ ಜೊತೆಗೇ ಇದ್ದಾರಂತೆ. ಮನೇವ್ರ ಹಾಗೆನೇ ಎಲ್ಲಾ ನೋಡ್ಕೊ ತಾರಂತೆ" ನಿಂಗಿಯಿಂದ ಬಂದ ಸುದ್ದಿ ಸಂಗ್ರಹ ಬಿತ್ತರಿಸಿದೆ.

ಪಾಪ! ಒಳ್ಳೇ ಜನ. ನಾಯೀನ ಬೇರೆ ಕಡೆ ಕಟ್ಟಿದ್ರು ಆತ, ಆಕೆ ಬಂದು ಅಪೊಲಜೈಸ್ ಮಾಡಿಕೊಂಡ್ರು. ಭಾಷೆ ಚೆನ್ನಾಗಿ ಬರ್ದೇ ಇದ್ರೂ...ಒಳ್ಳೆ friends ಆಗಿಬಿಟ್ವಿ.

ಹದಿನೈದು ದಿನ ಕಳೆದಿತ್ತು. ಮಧ್ಯಾಹ್ನ ಎರಡು ಗಂಟೆ ಸಮಯ. ಪಕ್ಕದ ಮನೆಯಾಕೆ ಓಡಿ ಬಂದ್ರು. "ಧಬ್ ಧಬ್" ಬಾಗಿಲು ಬಡಿದ್ರು.

"ಯಾಕೆ, ಏನಾಯ್ತು?" ಎಂದೆ. ಆಕೆ ಬಹಳ ಗಾಬರಿಯಾಗಿದ್ದರು.

"ಅಮ್ಮೋಯ್ ! ಚೂಡಂಡಿ, ಮಾ ಕುಕ್ಕಕಿ ಪೆರಾಲಿಸಿಸ್ ವಚ್ಚಿಂದಿ". ಕೈ, ಕೈ ಹಿಸುಕಿಕೊಂಡರು.

"ಯಾವಾಗಿನಿಂದ ?"

"ಇಪ್ಪುಡೇ ಅಂಡಿ. ಮೊಹಂ ತಿರುಹಿಪೋಯಿಂದಿ. ಯವರೈನಾ ಡಾಕ್ಟರ್ ತೆಲಿಸಿನಾ ಮಾಕು ?''

ಆಕೆ ಆತಂಕ ಕಂಡು ಕನಿಕರವಾಯ್ತು. "Don't worry. I will call my doctor"

"ಚಾಲ Thank ಅಂಡಿ.thank you very much" ಎಂದು ಓಡಿದ್ರು.

ಅಡಿಗೆಯವರು, ಆಳು, ಕಾಳು ಅಂತ ಸುಖ ಬೇಕಾದ್ರೆ ಅದೂ ಊರಿಂದ ಕರ್ಕೊಂಡು ಬಂದ್ರೆ ಎಷ್ಟು ತಾಪತ್ರಯ. ಭಾಷೆ ಗೊತ್ತಿಲ್ಲ, ಹೊಸ ಜಾಗ......ಸರಿ. ನಮ್ಮನೆ ಡಾಕ್ಟ್ರು Dr. ರಾಮಕೃಷ್ಣ ಅವ್ರಿಗೆ ಫೋನ್ ಮಾಡ್ದೆ.

"ನಾನು ಈಗ ತುಂಬಾ ಬಿಜಿ. ನನ್ನ Assistant ವೆಂಕಟೇಶ್‌ನ ಕಳಸ್ತೀನಿ. ನೀವು ನಿಮ್ಮನೆ ಹತ್ರ ಇರೋ ಹಾಲಿನ ಬೂತ್ ಬಳಿ ಇರಿ. ಅವನ್ಗೆ ಮನೆ ತೋರ್ಸಿ. ಪೇಷಂಟ್ ನೋಡಿ ಹೇಳ್ತಾನೆ," ಎಂದ್ರು.

ಬೇಗ ಬೇಗ ರೆಡಿ ಆಗಿ ಹೋದೆ. ಹದಿನೈದು ನಿಮಿಷದಲ್ಲಿ ಅವರ ಅಂಬುಲೆನ್ಸ್‌ನಲ್ಲಿ ಡಾ॥ ವೆಂಕಟೇಶ್ ಬಂದ್ರು. ಅವ್ರನ್ನ ಕರ್ಕೊಂಡು ಪಕ್ಕದ ಮನೇಗೆ ಬಂದ್ವಿ. ಒಳ ಬಾಗಿಲಲ್ಲಿ ಚಿಕ್ಕ ಪಾಪು ಅಳುತ್ತಾ ನಿಂತಿತ್ತು. "ಅಳಬೇಡ, ಎಲ್ಲಾ ಸರಿಯಾಗುತ್ತೆ" ಅಂದೆ.

ಡಾ॥ ವೆಂಕಟೇಶ್ ಮಗುವಿನ ಕೈಹಿಡಿದು ಒಳಗೆ ಹೋದ್ರು. ಎರಡು ನಿಮಿಷದಲ್ಲೇ ಹೊರಗೆ ಬಂದ್ರು. ಮುಖ ಒಳ್ಳೇ tomato ಹಣ್ಣಿನ ತರಹ

ಕೆಂಪಾಗಿತ್ತು. ಸಿಟ್ಟಿನಿಂದ "ಏನ್ರಿ ಇದು ತಮಾಷೆ ? why do you want to waste my time ! I came resting" ಎಂದು ಬುಸುಗುಟ್ಟುತ್ತಾ ಹೊರಟೇ ಹೋದರು.

ಏನಾಯ್ತು ಅಂತ ತಿಳೀಲಿಲ್ಲ. ಒಳಗೆ ಹೋಗಿ ನೋಡಿದೆ. ಅಂಗಳದ ಗೋಣಿ ಚೀಲದ ಮೇಲೆ ಮಲಗಿತ್ತು ಅವರ "ಕುಕ್ಕ". ಅವರ ತೆಲುಗಿನ 'ಕುಕ್ಕ' ನನ್ನ ಇಂಗ್ಲೀಷ್ "ಕುಕ್ಕಾ"ಗಿ ಆಭಾಸವಾಗಿತ್ತು.

ಬಂದ್

ಬಂದಿದ್ದವರು ಕಛೇರಿಗೆ
ಬಂದ್ ಇರಲಿಲ್ಲವೆಂದು
ಗಿಟ್ಟಿಸಿದರು
ಹಾಜರಿ–
ಕೆಲಸವಿಲ್ಲದ ಗಳಿಕೆ.

ಬಂದ್ ಇದ್ದವರು ಕಛೇರಿಗೆ
ಬಂದಿರಲಿಲ್ಲವೆಂದು
ಗಿಟ್ಟಿಸಿದರು
ಹಾ! ಜರಿ!
ಕೆಲಸಕಿಲ್ಲದಗ್ಗಳಿಕೆ.

ಕೆ. ಜಿ ಸತೀಶ್



“ಅಳಿಯಂದ್ರೆಲ್ಲಾ ರಜಾಕ್ಕೆ ಬರ್ತಾರಂತೆ...ನಿಮ್ಮಪ್ಪನ ಮನೆಗೆ
ಹೊರಟೋಗ್ಬೋಣವೇನು ?”



ಚೊಕ್ಕಮ್ಮನವರ ಗಾದೆಗಳು

—ಟೀಯೆಸ್ಸಾರ್ರಾವ್

ಶ್ರೀಮತಿ ಚೊಕ್ಕಮ್ಮನವರು ಮಹಿಳಾ ಸಮಾಜದ ನಂಬರಾದಾಗಿನಿಂದಲೂ ಒಂದು ಮಹತ್ತರ ಆಕಾಂಕ್ಷೆ ಅವರನ್ನು ಪೀಡಿಸುತ್ತಿತ್ತು—ಜನ ನೆರೆದಾಗಲೆಲ್ಲಾ, ಸಮಯ ಸಿಕ್ಕಾಗಲೆಲ್ಲಾ, ತಾವು ಬಾಲ್ಯದಿಂದಲೂ ಮೋಹಬಿದ್ದು ಕಲಿತ ಗಾದೆಗಳನ್ನು ಚಲಾಯಿಸಬೇಕೆಂಬುದು. ಏಕೆಂದರೆ ಮನೆಯಲ್ಲಿ ಶ್ರೀಮರ್ನಾ ಶಿಂಗ್ರಾಚಾರಿ ಚೊಕ್ಕಮ್ಮನವರ ಮೇಲೆ; 'ಗಂಡಸಿಗ್ಯಾಕೆ ಗೌರೀ ದುಃಖ' 'ಕಂಡದ್ದು ಬಿಡದು ಗಂಡೇ ಮಾರಿ' 'ಹತ್ತಿ ತೂಗುವಲ್ಲಿನ ಹೆಣದ ಹಾಗೆ' ಇತ್ಯಾದಿ ಗಾದೆಗಳಲ್ಲದೆ ಬಾಕಿ ಅನೇಕವನ್ನು ಪ್ರಯೋಗಿಸುವ ಅವಕಾಶವಿರಲಿಲ್ಲ.

ಒಂದಾನೊಂದು ಬಾರಿ ಸಮಾಜದ ಮಕ್ಕಳಮ್ಮಗಳು ಅಧ್ಯಕ್ಷಿಣಿಗೆ ಸತ್ಕೂಟ ಒಂದನ್ನು ಏರ್ಪಡಿಸಿದ್ದುವು. ಇಂಥ ಸತ್ಕೂಟಗಳು ಒಬ್ಬೊಬ್ಬ ಅಧ್ಯಕ್ಷಿಣಿ 'ಹೋದಾಗಲೂ' ಎಷ್ಟೋ ನಡೆದಾಗ್ಯೂ, "ರೊಟ್ಟಿ ಹಳಸಿತ್ತು—ನಾಯಿ ಕಾದಿತ್ತು ಅಂದ ಹಾಗೆ ಚೊಕ್ಕಮ್ಮನವರ ಗಾದೆಗಳ ಚಲಾವಣೆಗೋ ಎಂಬಂತೆ ಸದವಕಾಶವಾಯ್ತು.

ತುಂಬಿದ ಸಭೆಯ ಮಕ್ಕಳ ಹಾಗೂ ಮಕ್ಕಳಮ್ಮಗಳ ಕಾಕಾರವಗಳ ಮಧ್ಯೆ ಅಧ್ಯಕ್ಷಿಣಿ ಶ್ರೀಮತಿ ತುಂಗಮ್ಮಾ ತಿಮ್ಮಯ್ಯನವರು, ದಸರಾ ಜನಜಂಗುಳಿಯನ್ನು ಭೇದಿಸಿಕೊಂಡು ನುಗ್ಗುವ ಮದ್ದಾನೆಯೋಪಾದಿಯಲ್ಲಿ ತಮ್ಮ ಮಂದಹಾಸವನ್ನೂ, ಮಂದಗಮನವನ್ನೂ ಸಭೆಯಲ್ಲಿ ಬೀರುತ್ತಾ ತಮ್ಮದೇ ಆದ ವಿಕಟಾಟ್ಟಹಾಸದಿಂದ ಅಟ್ಟ(ವೇದಿಕೆ)ವನ್ನು ಅಲಂಕರಿಸಿದರು.

'ಮದ್ದೂರು ಉದ್ದಿನ ವಡೆಗೆ ಕಾದಿರುವ ಹದ್ದಿ'ನಂತೆ ಅಧ್ಯಕ್ಷಿಣಿಯ ಸುಸ್ವಾಗತ ಮಾಡಲು ಹಾತೊರೆಯುತ್ತಿದ್ದ ಚೊಕ್ಕಮ್ಮನವರು, "ಅಯ್ಯೋ..........'ಹೋದೆಯಾ ಪಿಶಾಚಿ ಅಂದರೆ ಬಂದೆ ಬೆಳಕಂಡೀಲಿ' ಅಂದ ಹಾಗೆ......ನಿಮಗೋಸ್ಕರವೇ ಕಾದಿದ್ದೆವು" ಎನ್ನುತ್ತಾ ಈ ಸಮಾರಂಭಕ್ಕೋಸ್ಕರವೇ ಸಿದ್ಧಪಡಿಸಿದ್ದ ಮುತ್ತುಗದ ಹಾರವನ್ನು ತುಂಗಮ್ಮನವರ ಕುತ್ತಿಗೆಗೆ ತೂಗುಬಿಟ್ಟರು. ಸಭೆ ಕೇಕಾಯಿಸಿತು—ಚಪ್ಪಾಳೆಗಳ ಮಧ್ಯೆ ಚೊಕ್ಕಮ್ಮನವರು ಮುಂದುವರಿದರು......

"ಈ ಮಹಾಸುದಿನದಲ್ಲಿ ನಮ್ಮ ಸಮಾಜದ ಕಾರ್ಯದರ್ಶಿನಿ—ಶ್ರೀಮತಿ ಕಪಿಲಾ ಕಾವೇರಪ್ಪನವರು ಹಟಾತ್ತಾಗಿ ಮನೆಯಲ್ಲೇ ಇರಬೇಕಾದುದರಿಂದ 'ಹಾಳೂರಿಗೆ ಉಳಿದವಳೇ ಗೌರಿ' ಎಂಬಂತೆ ಇಂದಿನ ಕಾರ್ಯಕಲಾಪಗಳ ಹೊರೆ ನನ್ನ ಮೇಲೆ ಬಿದ್ದಿದೆ. ಈ ದಿನದ ಸಮಾರಂಭವನ್ನು ಕೈಕೊಳ್ಳಲು ಬಂದಿರುವ ಶ್ರೀಮತಿ ತುಂಗಮ್ಮನವರು 'ದೂರದ ಬೆಟ್ಟ ನುಣ್ಣಗೆ' ಅನ್ನೋ ಹಾಗೆ ತುಂಬಾ ಸಭ್ಯ ಬುಡಕಟ್ಟಿನವರು. ಇವರ ಬಾಲ್ಯ ಹಾಗೂ ಯೌವನಾವಸ್ಥೆಯ ಜೀವನದ ಚಟುವಟಿಕೆಗಳನ್ನು ಸಭೆಗೆ ಪರಿಚಯ ಮಾಡಿಕೊಡುವುದು, "ಇದ್ದದ್ದಿದ್ದ ಹಾಗೇ ಹೇಳಿದರೆ ಎದ್ದು ಬಂದು ಎದೆಗೊದ್ದರು" ಅಂದಂತೆ..... ಬಹಳ ದೊಡ್ಡ ಕತೆ. 'ಶಿವಪೂಜೆಯಲ್ಲಿ ಕುರುಡಿ ನುಗ್ಗಿದ ಹಾಗೆ'...ಈ ಸಾಹಸಕ್ಕೆ ನಾ ಕೈಹಾಕಲಾರೆ.

ಆದರೂ 'ಕೈಗೆ ಬಂದ ಮುತ್ತು ಬಾಯಿಗಿಲ್ಲ' ಅನ್ನದೆ ನಾನು ಎರಡು ಮಾತು ಹೇಳಬಯಸುತ್ತೇನೆ. ತುಂಗಮ್ಮನವರದು ಹುರುಳಿಕಟ್ಟಿನಂತೆ ಸರಳ ಸ್ವಭಾವ. 'ಧರ್ಮಕ್ಕೆ ದುಪಟಿ ಕೊಟ್ರೆ ಡ್ರೈವಾಷ್ ಮಾಡಿಕೊಡು' ಅಂದ ಹಾಗೆ ಬಹಳ ಒತ್ತಾಯದ ಮೇಲೆ ಈ ಸಮಾರಂಭಕ್ಕೆ ದಯಮಾಡಿಸಿದ್ದಾರೆ. ಅಲ್ಪಕಾಲ ಮಾತ್ರವೇ ಅವರು ಇಲ್ಲಿ ಇರಲು ಸಾಧ್ಯವೆಂದು ತಿಳಿಸಿದ್ದಾರೆ—ಏಕೆಂದರೆ 'ತಿನ್ನೋದು ಹಿಟ್ಟು–ಆಡೋದು ಕಿರ್ಕಿಟ್ಟು' ಅನ್ನುವಂತೆ ಶ್ರೀಮಾನ್ ತಿಮ್ಮಯ್ಯ ತುಂಗಮ್ಮನವರಿಗೆ ಈ ದಿನ ಯಾವುದೋ ಮ್ಯಾಚ್ ಇದೆಯಂತೆ. ಶ್ರೀಮತಿ ತುಂಗಮ್ಮನವರು 'ದಬ್ಬಳ ಹಾಕಿದರೆ ಸೂಜಿ ಹೊರಬಂತು ಅಂದಂತೆ ತಿಮ್ಮಯ್ಯನವರನ್ನು ಕಟ್ಟಿಕೊಂಡ ಮೇಲೂ ಸಹ, 'ಗೂಳಿ ಬಂದಾಗ ಏರಿಕೊಂಡಂತೆ ತಿಮ್ಮಯ್ಯನವರನ್ನು ಹಸುಳೆಯಂತೆ ಕಾಪಾಡುತ್ತಿದ್ದಾರೆ—ಇದರಿಂದ ತಿಮ್ಮಯ್ಯನವರು 'ರೋಗಿ ಬಯಸಿದ್ದು ತಿಳಿಸಾರು—ವೈದ್ಯ ಕೊಟ್ಟಿದ್ದು ಕ್ವಿನೈನ್ ನೀರು' ಅಂತಂದ ಹಾಗೆ ತಮ್ಮ ಹುಡುಗತನದ ದರ್ಪವನ್ನೆಲ್ಲಾ ಕಳೆದುಕೊಂಡು ಸಾಧುವಾಗಿದ್ದಾರೆ. 'ನವಿಲು ನೋಡಿ ಕೆಂಬೂತ ಪುಕ್ಕ ತೆರೆದುಕೊಂಡ'ಂತೆ ಶ್ರೀಮತಿಯವರು ಮದುವೆಯಾದರೂ ವೀಣೆ ಅಭ್ಯಾಸ ಬಿಡಲಿಲ್ಲ. ನಿಮ್ಮಲ್ಲಿ ಅನೇಕರಿಗೆ ಇವರ ನಖದರ್ಶನವಾಗಿರಬಹುದು, 'ಅಂಗೈ ನೋಡಿ ಅಯ್ಯೋ' ಎಂದ ಹಾಗೆ.

'ಕಂಪ್ರಿನಾಯೀಂಗೆ ಕಾಂತಿ ಸಾಬೂನು ತಿಕ್ಕಿದ್ರೂಂತ ಈ ದಿನ ಇವರ ಗೌರವಾರ್ಥವಾಗಿ ಏರ್ಪಡಿಸಿರುವ ಉಪಹಾರವನ್ನು ತೀರಿಸಬೇಕೆಂದು ಸಭೆಯ ಪರವಾಗಿ ನಾನು ಶ್ರೀಮತಿ ತುಂಗಮ್ಮನವರಲ್ಲಿ ವಿಶ್ವಾಸದಿಂದ 'ಮುಸುಕಿನೊಳಗಿನ ಮುದ್ದು'ನಂತೆ ಬಿನ್ನವಿಸಿಕೊಳ್ಳುತ್ತೇನೆ. ''ರಹೀಂಸಾಬೀಗ್ಯಾಕೆ ಋಷಿಪಂಚಮಿ'' ಅನ್ನೋ ಹಾಗೆ...ಪಾಪ......ಮನೇ ಒಳಗಿನ ಮಂಗಳ ಕಾರ್ಯ ಬಿಟ್ಟು ಇಲ್ಲಿಗೆ ಬಂದಿದ್ದಾರೆ—ಪಾಪ...'ಅರವತ್ತಕ್ಕೆ ಅರಳೋ ಅವಲಕ್ಕಿಯೋ" !

ಇನ್ನೊಮ್ಮೆ ಅಧ್ಯಕ್ಷಿಣಿಯವರನ್ನು ನಿಮ್ಮ ಪರವಾಗಿ ವಂದಿಸಿ, ಅವರು ಬಂದದ್ದಕ್ಕೆ ಕೃತಜ್ಞತೆಯಿಂದ ನಮ್ಮ ಸಂತೋಷವನ್ನು ವ್ಯಕ್ತಪಡಿಸಿ, "ಬ್ರಹ್ಮಾಸ್ತ್ರ ಬಿದ್ದರೂ ಗುಬ್ಬಿ ಸಾಯಲಿಲ್ಲ" ಅಂತಲ್ಲದೆ ನನ್ನ ಈ ಪುಟ್ಟ ಉಪನ್ಯಾಸವನ್ನು ನಿಲ್ಲಿಸುತ್ತೇನೆ. ಕಾಕತಾಳ ನ್ಯಾಯದಂತೆ ಈವರೆಗೂ ತಾಳ್ಮೆಯಿಂದ ಕೂತಿದ್ದ ನೀವೆಲ್ಲ ನನ್ನ ಭಾಷಣದಲ್ಲಿ ಕಂಡುಬಂದ ಜಿಪ್ಪುಸೆಪ್ಪುಗಳನ್ನು ಕಂಸಕ್ಷೀರನ್ಯಾಯದೋಪಾದಿಯಲ್ಲಿ ನುಂಗಿಬಿಡುತ್ತೀರಾಗಿ ನನ್ನ ನಂಬಿಕೆ.

'ಹಾಲು ಕಂಡಲ್ಲಿ ಬೆಕ್ಕು ಕೂತಿತು; ಕೂಳು ಕಂಡಲ್ಲಿ ನಾಯಿ ಕೂತಿತು ಎನ್ನುವಂತೆ ಈ ದಿನ ಬಂದಿರುವ ನಂಬರುದಾರರೆಲ್ಲ ಈ ಸಮಾರಂಭದಲ್ಲಿ ಏರ್ಪಡಿಸಿರುವ ಉಪಹಾರಕ್ಕೆ ದಯಮಾಡಿಸಿ, ಇಂದಿನ ಕೂಟವನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸುತ್ತೀರಾಗಿ ನನ್ನ ಭರವಸೆ, 'ಕೂರೆಗಂಜಿಕೊಂಡು ಸೀರೆಬಿಟ್ರು ಅನ್ನುವಂತೆ ಯಾರೂ ತಪ್ಪಿಸಿಕೊಳ್ಳಬಾರದು."·

ದಟ್ಟವಾದ ಚಪ್ಪಾಳೆಗಳ ಮಧ್ಯೆ ಚೊಕ್ಕಮ್ಮನವರು ತಮ್ಮ ಮನದಾಸೆ ಕೈಗೂಡಿದ್ದಕ್ಕೆ ಹಿಗ್ಗಿ, ವಿಜಯಮುದ್ರೆಯಿಂದ ಕೂಡಿದ ಮೂಗನ್ನು ಗಗನಕ್ಕೆ ಚಾಚುತ್ತಾ ಅಧ್ಯಕ್ಷಿಣಿಯವರೊಡನೆ ಹೊರಟರು. ತುಂಗಮ್ಮನವರೂ ಸಭೆಗೆ ಕೃತಜ್ಞತೆಯಿಂದ ನಮಸ್ಕರಿಸಿ ಎದ್ದರು.

ಅಂದಿನಿಂದ ಕಾರ್ಯದರ್ಶಿ ಇಲ್ಲದಿದ್ದರೆ ಕಾರ್ಯ ನಿಂತಂತೆಯೇ. ಚೊಕ್ಕಮ್ಮನವರಿಗೆ ಮಾತ್ರ ಆ ಕೆಲಸವನ್ನು ಒಪ್ಪಿಸುವುದಿಲ್ಲ. ಇದರಿಂದ ರೇಗಿದ ಚೊಕ್ಕಮ್ಮನವರು 'ಗಾದೆಯೋ ಬಾಧೆಯೋ' ಎಂಬ ನಾಟಕವನ್ನೂ 'ಅಯ್ಯೋ' ಎಂಬ ಗಾದೆಗಳ ನಿಘಂಟನ್ನೂ ಹೊರಗೆಡಹಲು ಟೊಂಕ ಕಟ್ಟಿದ್ದಾರಂತೆ. ಎಚ್ಚರಿಕೆ ! ಕಾದಿರಿ ! !



“ಏ–ತೆಪ್ಗೆ ನಡಿ...ನೀ ಸಾಚಾ ಆಗಿದ್ರೆ ಸನ್ಗೇನು ?
ತಿಂಗ್ಳ ಕೊನೇ...ಕೇಸ್ ನಿಮ್ಮಪ್ಪ ಕೊಡ್ತಾನ ?”

ಒಂದು ಪ್ರತಿಕ್ರಿಯೆ

—ಆನಂದ್

ಹೋದ ಭಾನುವಾರ ಮಧ್ಯಾಹ್ನ, (ಯುಗಾದಿಗೆ ಒಳ್ಳೆ ಸೀರೆ ಕೊಟ್ಟಿದ್ದರಿಂದ) ಮನೆಯಲ್ಲಿ ಶಾಂತಿ ಆವರಿಸಿತ್ತು. ಭಾರಿ (ಇದಕ್ಕೆ ಕೆಲವರು ಭೂರಿ ಅಂತ ತಪ್ ಬರೀತಾರೆ) ಊಟ ಆದಮೇಲೆ ಯೋಚಿಸುತ್ತ ಕುಳಿತಿದ್ದೆ. ಸದ್ಯಕ್ಕೆ ಇದ್ದ ತಾಪ ತ್ರಯಗಳು ಯಾವುದೂ ನನ್ನ ಬಾದರ್ ಮಾಡೋ ಮಟ್ಟಕ್ಕೆ ಬಂದಿರಲಿಲ್ಲ. ಇದ್ದಕ್ಕಿದ್ದ ಹಾಗೇ ಒಂದು ಐಡಿಯಾ Flash ಆಯ್ತು! (ಈಚಿಗೆ ನಂಗೆ ಯಾಕೋ ಹೀಗಾಗ್ತಿದೆ)...ಕನ್ನಡ ಭಾಷೆಗೆ ಯಾಕೆ ಸ್ವಲ್ಪ ಸೇವೆ ಕೊಡಬಾರದು ?

ಹೊರಟೆ ಮನೆಯಿಂದ. ಮೊದಲು ನನ್ನ ಸ್ನೇಹಿತ ರಾಯನ ಮನೆ. ಅವನು ತೆರಿಗೆ ಅಧಿಕಾರಿ. ಅವನು ಯಾವುದೋ ಚಿಂತೆಯಲ್ಲಿ ಕುಳಿತಿದ್ದ. ಎಬ್ಬಿಸ್ದೆ. ಹೇಳಯ್ಯಾ ಒಂದು ಕನ್ನಡ ಸ್ಲೋಗನ್ ಅಂದೆ. ಸರೀ ಬರ್ಕೊ ಅಂದ.

"ಎಲ್ಲಾದರು ಇರು, ಎಂತಾದರು ಇರು
ಎಂದೆಂದಿಗು ನೀ
ತೆರಿಗೆಯ ಕೊಡುತಿರು !"

ಸರಿ ಇವನ ಜಾಯಮಾನವೇ ಇಷ್ಟು ಅಂತ ಮುಂದಕ್ಕೆ ಹೊರಟೆ. ಆಮೇಲೆ ಸಿಕ್ಕಿದ್ದು ನನ್ನ ಬಾಲ್ಯದ ಗೆಳೆಯ ಮೂರ್ತಿ. ಅವನು ಕೆ. ಇ. ಬಿ. ಯಲ್ಲಿ ಉನ್ನತ ಹುದ್ದೇಲಿದಾನೆ.

ಅವನ ಮನೇಗೆ ಹೋದಾಗ ಗಾಢಾಂಧಕಾರ ! ಕ್ಯಾಂಡಲ್ ಬೆಳಕಿನಲ್ಲಿ ಮೂರ್ತಿಯ ಪ್ಲಾನವದನ ಕಂಡಿತು. ಏನಯ್ಯ ಇದು, ನಿಂ ಮನೇಲೇ ಕರೆಂಟ್ ಇಲ್ಲ ಅಂತ ನಕ್ಕೆ. ರೇಗಿದ, ನಾವೇನು ಮನುಷ್ಯರಲ್ಲವೇನು ? ಅಂದ! ಇರಲಿ, ಕನ್ನಡದಲ್ಲಿ ಒಂದು ಒಳ್ಳೇ ಹೇಳಿಕೆ ಕೊಡು ಅಂದೆ. "ಕರುಣಾಳು, ಬಾ ಬೆಳಕೆ !" ಅಂದ ಮೂರ್ತಿ. ಸನ್ನಿವೇಶಕ್ಕೆ ಸರಿಯಾಗಿದೆ ಅಂದು ಅವನ ಮನೆಯಿಂದ ಹೊರಟೆ,

ನಂ ಸ್ಕೂಲ್ ಕನ್ನಡ ಪಂಡಿತರು ಸಿಕ್ಕಿದರು. ಅವರನ್ನೇ ಹಿಡಿದೆ. ಕನ್ನಡದ ಜನರನ್ನ ಹುರಿದುಂಬಿಸಬೇಕು ಸಾರ್ ! ಅಂದೆ. ಒಂದು ಒಣ ನಗೆ ನಕ್ಕರು.

ಏನಯ್ಯಾ ಮಾಡೋದು. ನಂ ನಾಡು ಕನ್ನಡವನ್ನೇ ಮರೆಯೋ ಹಾಗಿದೆ, ಅಂದು. ಬರ್ರ್ಕೋ ಅಂದರು.

ಕಣ್ದೆರೆಯುದಿರಿ ಓ ಕನ್ನಡದ ಮಕ್ಕಳಿರ,
ಗರ್ಜಿಸುವುದನೆ ಮರೆತು ಕಾಲು ನೀಡಿ !
ನತದೃಷ್ಟ ಕರ್ಮವಂ ಜರೆ ಜರೆದು ಹಳಿಯುತ್ತ
ತಲೆ ಬಾಗಿ ಆತ್ಮ ಬಲ ಪೂರ ನೀಗಿ ! !

ಇನ್ನೂ ಮಾತಾಡಿದರೆ ಅತ್ತೇ ಬಿಡ್ತಾರೆ ಅಂತ ಮುಂದೆ ನಡೆದೆ.

ಏನೋ ಭಾರೀ ಶಬ್ದ ಆಯ್ತು. ಅಬ್ಬ ಅಂತ ತಿರುಗಿ ನೋಡಿದೆ,

O O O O

ಎಚ್ಚರವಾಯ್ತು, ಹಾಸಿಗೆ ಪಕ್ಕದಲ್ಲಿ ಏಪ್ರಿಲ್ ಅಪರಂಜಿ ಬಿದ್ದಿತ್ತು,

ಅಭಿಮತ

ನವೋದಯ, ನವ್ಯ,
ಬಂಡಾಯ, ದಲಿತ ?
ಯಾವುದಾದರೂ ಸರಿ
ಮೊದಲು ಬರಿ
ಅಂದಳು ಲಲಿತ.

ಅಂತರ

ಓದಿದ್ದು ಕಾಮಂ ಕಾಫ್ಕಾ
ಬರೆದದ್ದು
ಕಾಮ, ಹಲ್ಕಾ !

ಎಚ್. ಡುಂಡಿರಾಜ್


ಜನಪ್ರಿಯ ವಿಜ್ಞಾನ—ಕ್ಷಿಪಣಿಗಳು

—ಶಿವು

ಹಿನ್ನೆಲೆ

ವಿಶ್ವಾಮಿತ್ರ ಮಹರ್ಷಿಗಳ ಯಜ್ಞಭಂಗ ಮಾಡಲು ಬಂದ ಮಾರೀಚ ಸುಬಾಹುಗಳ ಮೇಲೆ ಶ್ರೀರಾಮಚಂದ್ರ ಪ್ರಯೋಗಿಸಿದ. ಮಾನವಾಸ್ತ್ರ ಹಾಗೂ ಆಗ್ನೇಯಾಸ್ತ್ರಗಳೇ ಮೊಟ್ಟ ಮೊದಲ ಕ್ಷಿಪಣಿಗಳು. ನಂತರ ಅದೇ ಆರ್ಯಕುಲದ ಹಿಟ್ಲರ್ ಮಹಾಶಯ ಈ ಅಸ್ತ್ರಗಳನ್ನು ಪುನಃ ಕಂಡುಹಿಡಿದು "ವಿ–ಟು" ಎಂಬ ಹೆಸರಿನ ಕ್ಷಿಪಣಿಗಳನ್ನು ಬ್ರಿಟನ್ನಿನ ಮೇಲೆ ಎರಡನೇ ಮಹಾಯುದ್ಧದಲ್ಲಿ ಪ್ರಯೋಗಿಸಿದ್ದು ಎಲ್ಲರಿಗೂ ತಿಳಿದ ವಿಷಯ. ಯುದ್ಧದಲ್ಲಿ ಜರ್ಮನಿ ಸೋತನಂತರ, ಅಮೆರಿಕಾ, ರಷ್ಯಾಗಳು. ಜರ್ಮನ್ ರಾಕೆಟ್ ತಜ್ಞರನ್ನು ಸಮನಾಗಿ ಹಂಚಿಕೊಂಡಾಗಿನಿಂದ, ಎರಡೂ ಪ್ರಬಲ ರಾಷ್ಟ್ರಗಳ ಕ್ಷಿಪಣಿ ತಯಾರಿಕಾ ಕಾರ್ಯಕ್ರಮ ಬಹು ತ್ವರಿತಗತಿಯಿಂದ ಸಾಗಿದೆ. ಜಂಬೂ ದ್ವೀಪದಲ್ಲಿನ ಭರತಖಂಡದಲ್ಲಿಯೂ ಸಹ, ಇತ್ತೀಚೆಗೆ ಕ್ಷಿಪಣಿ ಕಾರ್ಯಕ್ರಮ, ಇತರ ಯಾವುದೇ ದೇಶಕ್ಕಿಂತ ಹಿಂದೆ ಬಿದ್ದಿಲ್ಲವೆಂಬುದು ಭಾರತೀಯರಾದ ನಮ್ಮೆಲ್ಲರಿಗೂ ಹೆಮ್ಮೆ ತರುವ ವಿಷಯವೇ ಸರಿ.

ಭರತ ಖಂಡದ ಕ್ಷಿಪಣಿಗಳು




೧. ರಾಕೆಟ್

ಶಿವಕಾಶಿ, ಈ ಸಾಧನದ ತಯಾರಿಕೆಯಲ್ಲಿ ಅತಿ ಹೆಚ್ಚು ಮುಂದುವರಿದ ಪ್ರದೇಶ. ಶಿವಕಾಶಿಯ ರಾಕೆಟ್‌ಗಳನ್ನು ದೀಪಾವಳಿ ಸಮಯದಲ್ಲಿ ದೇಶಾದ್ಯಂತ ಕಾಣಬಹುದು. ಈ ರಾಕೆಟ್‌ಗಳ ರಚನೆ ಬಹು ಸರಳ. ಒಂದು ಬಿದಿರು ಕಡ್ಡಿಯ ಕೊನೆಗೆ ಮದ್ದು ತುಂಬಿರುವ ಒಂದು ಕಾಗದದ ಸುರುಳಿಯನ್ನು. ಕಟ್ಟಿರುತ್ತೆ. ಸುರುಳಿಯ ತುದಿಯಲ್ಲಿ ಒಂದು ಬತ್ತಿ. ಒಂದು ಖಾಲಿ ಹಾಲಿನ ಶೀಶೆಯಲ್ಲಿ ಬಿದಿರು ಕಡ್ಡಿಯನ್ನಿಟ್ಟು, ಬತ್ತಿಗೆ ಬೆಂಕಿ ಇಟ್ಟರೆ, ಸುರ್ರೊಂಯ್ ಎಂದು ರಾಕೆಟ್ ಗಗನದತ್ತ ಹಾರುತ್ತದೆ.

೨. ಟಿ. ವಿ. ಅಸ್ತ್ರಗಳು

ಇವುಗಳನ್ನು ಪ್ರತಿ ಭಾನುವಾರ ಟಿ. ವಿ. ಯಲ್ಲಿ ನೋಡಬಹುದು,




ಶ್ರೀರಾಮ, ಲಕ್ಷ್ಮಣ, ಇಂದ್ರಜಿತ್, ರಾವಣ ಇವರೆಲ್ಲಾ ಈ ಅಸ್ತ್ರಗಳ ಪ್ರಯೋಗದಲ್ಲಿ ಪರಿಣಿತರು. ಈ ಅಸ್ತ್ರ ಬಾಣದಾಕಾರದಲ್ಲಿದ್ದು, ಇದರ ಮುಂದೆ ವಿವಿಧ ರೂಪದ ಅಲೆಗಳು ಚಲಿಸುತ್ತಿರುತ್ತದೆ. ಈ ಅಲೆಗಳ ರೂಪ, ವರ್ಣ ವಿನ್ಯಾಸ ನಯನ ಮನೋಹರವಾಗಿದ್ದು. ಶ್ರೀ ರಾಮ ಹಾಗೂ ಲಕ್ಷ್ಮಣ ಪ್ರಯೋಗಿಸಿದ ಅಸ್ತ್ರಗಳು ಯಾವಾಗಲೂ ಮೇಲುಗೈಯಾಗಿರುತ್ತವೆ. ಐಂದ್ರಾಸ್ತ್ರ, ವಾಯುವ್ಯಾಸ್ತ್ರ, ಆಗ್ನೇಯಾಸ್ತ್ರ, ವಾರುಣಾಸ್ತ್ರ ಇವೆಲ್ಲಾ ಈ ಅಸ್ತ್ರಗಳ ವಿವಿಧ ರೂಪಗಳು. ಬ್ರಹ್ಮಾಸ್ತ್ರದ ತುದಿಯಲ್ಲಿ ಮುದುಕನೊಬ್ಬ ಕೂತಿರುತ್ತಾನೆ. (ಟಿ. ವಿ. ಯಲ್ಲಿ ಕಂಡಂತೆ)

೩. I.S.R.O. ಕ್ಷಿಪಣಿಗಳು

ಭಾರತೀಯ ಬಾಹ್ಯಾಕಾಶ ಸಂಸ್ಥೆಯವರು ಈ ಕ್ಷಿಪಣಿಗಳನ್ನು ತಯಾರಿಸುತ್ತಾರೆ. ಇವು ಸಾಮಾನ್ಯವಾಗಿ ಶ್ರೀಹರಿಕೋಟ ಎಂಬ ಪ್ರದೇಶದಿಂದ ಹಾರಿಸಲ್ಪಟ್ಟು ಬಂಗಾಳಕೊಲ್ಲಿಯಲ್ಲಿ ತಮ್ಮ ಯಾನವನ್ನು ಮುಗಿಸುತ್ತವೆ.

ಅಮೆರಿಕಾದ ಕೆಲವು ಕ್ಷಿಪಣಿಗಳು, ಶತ್ರು ವಿಮಾನಗಳನ್ನು ನಾಶಪಡಿಸಲು ಒಂದು ವಿನೂತನವಾದ ಸಾಧನವನ್ನು ಹೊಂದಿರುತ್ತದೆ, ಈ ಕ್ಷಿಪಣಿಗಳು ಶಾಖ ಹೊಮ್ಮುತ್ತಿರುವ ಪದಾರ್ಥಗಳನ್ನು (ಉದಾಹರಣೆಗೆ ವಿಮಾನದ ಜೆಟ್ ಇಂಜಿನ್)



ಅರಿಸಿಕೊಂಡು ಹೋಗಿ ಅವುಗಳನ್ನು ಧ್ವಂಸ ಮಾಡುತ್ತವಂತೆ. (Heat seeking Missiles). ಯಾವಾಗಲೂ ನೀರನ್ನು ಹುಡುಕಿಕೊಂಡು ಹೋಗಿ ಅದರಲ್ಲಿ ಮುಳುಗುವುದೇ I. S. R. O. ಕ್ಷಿಪಣಿಗಳ ಮುಖ್ಯ ಲಕ್ಷಣ (Water Seeking Missiles).

ಪುನಃ ಪುನಃ ಪ್ರಯೋಗಿಸಬಹುದಾದ ಕ್ಷಿಪಣಿಗಳು

ಒಮ್ಮೆ ಪ್ರಯೋಗಿಸಿದ ಕ್ಷಿಪಣಿ ಉರಿದು ಹೋಗಿ ಮತ್ತೆ ಉಪಯೋಗಕ್ಕೆ ಬರುವುದಿಲ್ಲ. ಈ ನಿಯಮಕ್ಕೆ ಹೊರತಾದ ಕ್ಷಿಪಣಿಗಳು ಮುಖ್ಯವಾಗಿ ೧. ವಿಷ್ಣು ಚಕ್ರ ೨. ತ್ರಿಶೂಲ. ಈ ಎರಡೂ ಅಸ್ತ್ರಗಳು, ಪ್ರಯೋಗಿಸಿದ ನಂತರ, ಶತ್ರುವಿನ ಶಿರವನ್ನು ಛೇಧಿಸಿ, ಮತ್ತೆ ಒಡೆಯನ ಕೈಯನ್ನು ಸೇರುತ್ತವೆ.

ಕ್ಷಿಪಣಿಗಳ ಉಪಯೋಗಗಳು

೧. ದೀಪಾವಳಿ ಸಮಯದಲ್ಲಿ ಮನರಂಜನೆ

೨. ಬಂಗಾಳ ಕೊಲ್ಲಿಯಲ್ಲಿ ಷಾರ್ಕ್‌ಗಳ ನಾಶ

೩. ಎರಡು ಪ್ರಬಲ ರಾಷ್ಟ್ರಗಳ ನಡುವೆ ಯುದ್ಧ ಸ್ತಂಭನ

೪, ಅಂತರ್ಗಹ ಯಾನ

೫. ತೀರಾ ಬೇಜಾರಾದರೆ, ಅಮೆರಿಕಾ ಯಾ ರಷ್ಯಾದಲ್ಲಿ ಒಂದು ಗುಂಡಿಯನ್ನು ಒತ್ತಿದರೆ ಲೋಕದ ಸಮಸ್ತ ಜನಸ್ತೋಮದ ತಾಪತ್ರಯಗಳನ್ನು ಒಂದೇ ಕ್ಷಣದಲ್ಲಿ ಪರಿಹರಿಸಬಹುದಾದ ಸಾಧ್ಯತೆ.



"ನಿಮ್ಮ ಹಳ್ಳೀಲಿ ನಮ್ಮ ನಾಯಕರ ಪ್ರತಿಮೆ ನಿಲ್ಲಿಸ್ತೀವಿ ಅಂದ್ರೆ...
ಬೇಡ, ನೀರು ಕೊಡಿ, ಸ್ಕೂಲು ಕೊಡಿ ಅಂತ ಕೇಳತ್ವಲ್ಲಾ ಈ ಹಳ್ಳೀ ಮುಕ್ಕಗಳ !"

"ಪ್ಪ" ಲೋಪ

—ಶಿವ ನಮಿರಾಜ ಮಲ್ಲ

"ಪ್ರಿಯರೆ

೧. ಇಂದಿನ ಪತ್ರಿಕೆಯಲ್ಲಿ ತಾವು ಮಂತ್ರಿ ಪದವಿ ಕಳೆದುಕೊಳ್ಳಲಿರುವಿರೆಂಬ ಸುದ್ದಿ ಓದಿ ಷಾಕ್ ಆಯಿತು. ನನ್ನ ಒಬ್ಬ ಮಗಳು ಮೆಡಿಕಲ್ ಸೀಟಿಗೆ ಮತ್ತೊಬ್ಬ ಮಗ ಇಂಜಿನೀಯರಿಂಗ್ ಸೀಟಿಗೆ ಅರ್ಜಿ ಹಾಕುತ್ತಾರೆ. ಒಂದು ಕಾಲದಲ್ಲಿ ತಮ್ಮ ಆಪ್ತನಾಗಿದ್ದೆ ಎಂಬುದನ್ನು ಅವರು ತಿಳಿದಿರುವರು. ತಮಗೆ ಇದು ನೆನಪಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಸಕಾಲದಲ್ಲಿ ತಮ್ಮನ್ನು ಕಂಡು ಈ ಬಗ್ಗೆ ವಶೀಲಿ ಕೆಲಸ ಮಾಡಿಸಲು ಪ್ರಾರ್ಥಿಸಿಕೊಳ್ಳಬೇಕೆಂದಿದ್ದೆ. ಇದರಲ್ಲಿ ಇನ್ನೂ ಒಂದು ಪೀಕಲಾಟವೆಂದರೆ ನನ್ನ ಹೆಂಡತಿಯ ಆಭರಣಗಳನ್ನು 10 ಗ್ರಾಮಿಗೆ ರೂ.3,000 ದಂತೆ ಮಾರಿ, ಬಂದ ಹಣವನ್ನು ಸೀಟುಗಳಿಗಾಗಿ ತಮ್ಮ ಮೂಲಕ ವಿನಿಯೋಗಿಸುವೆನೆಂದು ಮಾತು ಕೊಟ್ಟಿದ್ದೆ. ಈ ಹಣದ ಹೆಚ್ಚಿನಂಶ ನನ್ನ ಒಂದು ಗುಪ್ತ ಸಾಲದ ಮರುಪಾವತಿಗಾಗಿ ಹೋಗಿದೆ. ಈಗ ಏನು ಮಾಡಬೇಕೋ ತಿಳಿಯದು......ಅಂತೂ ತಮ್ಮಿಂದ ರಾಜಿನಾಮೆ ಹೋಗದಿರಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ."

O O O O

೨. "ಮಂತ್ರಿಗಳಾಗಿದ್ದ ತಮ್ಮ ಯೋಗ್ಯತೆಯನ್ನು ಯಾರು ಅಳೆಯಲು ಶಕ್ತರು ? ಈಗ ತಾವು ರಾಜಿನಾಮೆ ಕೊಡಬೇಕಾಗಿ ಬಂದಿದೆ ಎಂಬುದು ದುಃಖದ ಮಾತು. ಕೆಮಿಕಲ್ ಇಂಜಿನಿಯರಿಂಗ್ ಪಾಸಾದ ನನ್ನ ಒಬ್ಬ ಮಗ ಒಂದು ಸಾರಾಯಿ ಬಾಟ್ಲಿಂಗ್ ಕಂತ್ರಾಟು ಪಡೆಯಬೇಕೆಂದು ಯತ್ನಿಸುತ್ತಿದ್ದಾನೆ. ನನ್ನ ಹೆಂಡತಿಯ ಭಾವನ ಮಾವನ ಅಳಿಯನ ತಮ್ಮನು ತಮ್ಮ ಕೈವಾರಿ ಎಂದು ಗೊತ್ತಿತ್ತು. ಒಂದು ಲಕ್ಷ ರೂಪಾಯಿ ತಮಗೆ ಕೊಟ್ಟರೆ ಲೈಸನ್ಸ್ ಸಿಗುವುದು ಖಂಡಿತವೆಂದು ಮಾತು ಕೊಟ್ಟಿದ್ದ ಆದರೆ ನನ್ನೊಡನೆ ತತ್‌ಕ್ಷಣ ನೀಡಲು ಹಣ ವಿರದಿದ್ದರಿಂದ ತಡವಾಯಿತು. ಅಷ್ಟರಲ್ಲೇ ರಾಜಿನಾಮೆ ನೀಡಲು ಕಾಲ ಬಂದುದು ನಮ್ಮ ದುರದೃಷ್ಟ."

O O O O

೩. "ನಮ್ಮೂರ ಪಿ. ಡಬ್ಲ್ಯು. ಡಿ. ಯವರು ಟೆಂಡರ್ ಕರೆದಿರುವ ಆಸ್ಪತ್ರೆ ಕಟ್ಟುವ ಕೆಲಸದ ಕಂಟ್ರಾಕ್ಟ್ ಪಡೆಯಲು ಸಿದ್ಧತೆ ನಡೆಸಿದ್ದೆ. ಆ ಇಂಜಿನಿಯರರ ಮಾವನಿಗೂ ತಮ್ಮ ಪಡ್ಡಕನೂ ಸೆಂಟ್ರಲ್ ಕಾಲೇಜಿನಲ್ಲಿ ಹಿಂದೆ ಕ್ಲಾಸ್‌ಮೇಟ್‌ಗಳಾಗಿದ್ದರಂತೆ. ಇಲ್ಲಿನಂತೆ ಸದರಿ ಎಂಜಿನಿಯರರು ಬೇರೆ ಕಡೆಗಳಲ್ಲಿ ಕೆಲಸ ಮಾಡುವಾಗಲೂ ಈ ಪಡ್ಡಕರ ಇನ್‌ಫ್ಲೂಯೆನ್ಸ್ ನಡೆದಿತ್ತಂತೆ. ಪುಲ್ಲೂರಿನ ಕಂಟ್ರಾಕ್ಟರ ಚಿಕ್ಕಣ್ಣ ಇಂದು ಲಕ್ಷಾಧೀಶನಾಗಲು ಇವರೇ ಕಾರಣರಂತೆ ಆದರೇನು ಮಾಡುವುದು ? ತಮ್ಮ ಮಂತ್ರಿ ಪಟ್ಟ ಹೋದರೆ ನನ್ನದು ಕನಸಿನ ಮಂಡಿಗೆ. ಏನಿದ್ದರೂ ಕೈ ಕಾಲು ಅಪ್ಪಿಕೊಂಡಾದರೂ ಸ್ಥಾನ ಉಳಿಸಿಕೊಳ್ಳಲು ಯತ್ನಿಸಿ"

O O O O

೪. "ನನ್ನ ನೆನಪಿದೆಯೋ ಇಲ್ಲವೋ ತಮಗೆ. ಆರು ವರ್ಷಗಳ ಹಿಂದೆ ಪಾರ್ಟಿ ಮೀಟಿಂಗಿಗೆ ನಮ್ಮೂರಿಗೆ ಬಂದ ನಿಮಗೆ ಹಿಂದೆ ಹೋಗಲು ನಾನು ಬಸ್ ಟಿಕೇಟು ಖರೀದಿಸಿ ಕೊಟ್ಟಿದ್ದೆ ಅಲ್ಲದೆ ರೂ. ಐವತ್ತನ್ನು 'ಸಾಲ'ವೆಂತಲೂ ಕೊಟ್ಟಿದ್ದೆ. ನಿಮ್ಮ ವಿಳಾಸಕ್ಕೆ ಆಮೇಲೆ ಬರೆದ ಕಾಗದಗಳಿಗೆ ಉತ್ತರವಿಲ್ಲ. ಈಗ ತಾವು ಹೇಗೋ ಗಳಿಸಿದ ಮಂತ್ರಿ ಪದವಿ ಕಳೆದುಕೊಳ್ಳುವಿರೆಂದು ತಿಳಿದು ನನಗೆ ಚಿಂತೆಯಾಗಿದೆ. ಒಂದೆರಡು ಪುಸ್ತಕ ಬರೆದ ನನ್ನ ಹೆಂಡ್ತಿ ಅಣ್ಣನಿಗೆ ತಮ್ಮ ಮೂಲಕ ಸಾಹಿತ್ಯ ಅಕಾಡಮಿ ಅಧ್ಯಕ್ಷಗಿರಿ ಕೊಡಿಸುವೆನೆಂದಿದ್ದೆ. ಈಗ ಆ ವಚನ ಭಂಗವಾಗದಂತೆ ನಮ್ಮನ್ನು ರಕ್ಷಿಸಿ."

O O O O

೫. "ನಮ್ಮೂರಿನ ದೇವಸ್ಥಾನಕ್ಕೆ ಹೊಸ ಗೋಪುರವೊಂದನ್ನು ಕಟ್ಟಿಸಿದ್ದೇವೆ. ಇದರ ಉದ್ಘಾಟನೆಗೆ ಮಹಾನುಭಾವ ಭಗವದ್ಭಕ್ತರಾದ ತಮ್ಮನ್ನು ಆಮಂತ್ರಿಸಲು ನಿಶ್ಚಯಿಸಿದ್ದೇವೆ. ಅಥವಾ ನಿಶ್ಚಯಿಸಿದ್ದೆವು. ತಮ್ಮ ಪ್ರೇರಣೆ ಮೂಲಕ ಸರ್ಕಾರದಿಂದ ಎರಡು ಮೂರು ಲಕ್ಷ ಸಹಾಯಧನ ಸಿಗಬಹುದೆಂದೂ ಲೆಕ್ಕ ಹಾಕಿದ್ದೆವು. ಆದರೆ ಈಗ ! ಎಲ್ಲ ಪರಮಾತ್ಮನ ದಯೆ. ತಾವು ದಯವಿಟ್ಟು ರಾಮಕೃಷ್ಣ ಸಹಸ್ರನಾಮವನ್ನು ದಿನಕ್ಕೆ ಮೂರು ಬಾರಿ ಜಪಿಸಿರಿ. ಪದಚ್ಯುತ ಜಯ ಎಂಬ ಹೋಮವನ್ನು ವಾರಕೊಮ್ಮೆ ಮಾಡಿಸುತ್ತಿದ್ದರೆ ಒಳ್ಳೇದು..."

O O O O

"ನಾನು ಈಗಾಗಲೇ ರತ್ನಪ್ಪನ ಹೆಸರಲ್ಲಿ ಒಂದು ಮೆಡಿಕಲ್ ಕಾಲೇಜನ್ನೂ ನನ್ನ ಮಾವನ ಹೆಸರಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜನ್ನೂ ತೆರೆಯಬೇಕೆಂದಿದ್ದೆ. ತಮ್ಮನ್ನು ಹಿಡಿದರೆ ಪರ್ಮಿಶನ್‌ಗಳು ದೊರೆಯುವುವು ಎಂಬುದನ್ನು ನಾನು ಮನಗಂಡಿದ್ದೆ. ಆದರೆ ಈಗ ತಮಗೇ ಆಪತ್ತು."

O O O O

ಪತ್ರಿಕೆ ನೋಡುವಾಗ ಮಲ್ಲಪ್ಪ ಎಂಬವರ ಪಟ್ಟಕ್ಕೆ ವಿಪತ್ತು ಬಂದಿತ್ತಂತೆ, "ನಮ್ಮ ನಿನ್ನೆಯ ಸಂಚಿಕೆಯಲ್ಲಿ ಮಲ್ಲಪ್ಪರ ಬದಲು "ಮಲ್ಲ" ಎಂದು 'ಪ್ಪ' ಲೋಪ ಮಾಡಿದ್ದಕ್ಕೆ ವಿಷಾಧಿಸುತ್ತೇವೆ" ಎಂದು ಅದರಲ್ಲಿ ದಪ್ಪಕ್ಷರದ ಬಾಕ್ಸ್ ಪ್ರಕಟಣೆ ನೋಡಿ ನಕ್ಕೆ.

ಹಿತವಚನ

ಆಗಿರಬೇಕು ಸಾಚಾ
ಕುಡಿದು
ಹಾಳಾಗಬೇಡವೋ ನೀಚಾ
ಕುಡಿಲೇ ಬೇಕು
ಅಂತನ್ನಿಸಿದರೆ
ಬಾ ಕುಡಿಯೋಣ
ಬೈ ಟೂ ಚಾ !

ಸಂಬಂಧ

ನಿನಗೆ ನಾನು
ಆಸರೆ
ನನಗೆ ನೀನು
ಆ
ಸೆರೆ

ಎಚ್. ಡುಂಡಿರಾಜ್

ಚುನಾವ(ರ)ಣ ಭೇರಿ !

—ವಿಕಟಕವಿ

ಸವಿನುಡಿಯ ಜಾಲವನು
ಕಟ್ಟುವೆವು ನಾವು
ಹೊಂಗನಸುಗಳ ಗುಡಿಯ
ನಿರ್ಮಿಸುವೆವು
ರಾಜಕೀಯದಿ ಪೂರ
ಮುಳುಗಿಹೆವು ನಾವು
ದೇಶವನೆ ನಡುಗಿಸುವ
ಹುಚ್ಚುಗಳು ನಾವು ! –1–

ಓಟುಗಳ ಮೆಟ್ಟಿಲನು
ಏರುವೆವು ನಾವು
ಭರವಸೆಯ ಸೌಧವನು
ಕಟ್ಟುವೆವು ನಾವು
ನಂಬುವರ ಮನಗಳನು
ಗೆಲ್ಲುವೆವು ನಾವು
ರಾಜಕೀಯದ ಹಾದಿ
ಬಲ್ಲವರು ನಾವು ! –2–

ಶೂನ್ಯದಲಿ ಹೊನ್ನನ್ನು
ಬೆಳೆಯುವೆವು ನಾವು
ಅಬ್ಬರಿಸಿ ಮಿಥ್ಯವನು
ಸತ್ಯವೆನ್ನುವೆವು
ಇಬ್ಬಗೆಯ ಮಾತಿನಲೂ
ಪರಿಣತರು ನಾವು
ಸಣ್ಣಲಿಯ ಹೆಬ್ಬುಲಿಯ
ಮಾಡುವೆವು ನಾವು ! –3–

ಚುನಾವಣೆಯ ಸಮರವನು
ಕಾದುವೆವು ನಾವು
ಹಗಲಿರುಳು ಮಳೆಬಿಸಿಲು
ಲೆಕ್ಕಿಸೆವು ನಾವು
ವಿರೋಧಿಗಳ ಕಲಹದಲಿ
ಮುಳುಗಿ ಏಳುವೆವು,
ನಾಡಿನಾ ಪ್ರಜೆಗಳನು
ಕಾದುವೆವು ನಾವು ! –4–

ನಿಮ್ಮ ಇಂದಿನ ವೋಟೆ
ನಮ್ಮ ನಾಳಿನ ದೀಕ್ಷೆ
ನಾವು ಕಟ್ಟುವ ಕೋಟೆ
ನಿಮಗೆಲ್ಲ ರಕ್ಷೆ !
ಮುಗಿದು ದೋಟುಗಳ ಬೇಟೆ
ನಮಗೋ ನಿರೀಕ್ಷೆ
ಚಿಮ್ಮಲಿ ಮತಗಳ ಊಟೆ
ಇಂದು ಮಾತ್ರ ಸಲ್ಲದುಪೇಕ್ಷೆ ! –5–

(ಕುವೆಂಪು ಅವರ ಕ್ಷಮೆ ಬೇಡಿ)

ಅಪರಂಜಿ ನೋಡಿದ ಚಿತ್ರ—ನ್ಯೂ ಡೆಲ್ಲಿ

—ಲೋಕನಾಥ ದೀಕ್ಷಿತ್

ಭಾನುವಾರ ಸಂಜೆ ಎಂಕನನ್ನು ಜಯನಗರ ಷಾಪಿಂಗ್ ಕಾಂಪ್ಲೆಕ್ಸ್ ಬಳಿ ಕಂಡಾಗ ಒಂದು ರೀತಿ ಆಶ್ಚರ್ಯವಾಯಿತು.

"ಏನಲೇ ಎಂಕಾ ಎಲ್ರೂ ಮಾಡೊ ಹಾಗೆ ಟಿ. ವಿ. ಮುಂದೆ ಕೂರೋದು ಬಿಟ್ಟು ಮಂಕನ ಹಾಗೆ ಮಾರ್ಕೆಟ್ ಅಲೀತಿದಿಯಾ" ಅಂದೆ.

"ಏನು ಮಾಡಲಿ ಗುರೂ ಮನೆಯಲ್ಲಿ ಟಿ. ವಿ. ಕಾಟ ಹೆಂಡ್ತಿ ಕಾಟ ಅಂತಾ ಹೇಳಿ 'ನ್ಯೂ ಡೆಲ್ಲಿ' ಗೆ ಹೋಗಿದ್ದೆ...ಅಂದಾ ಸುಸ್ತಾಗಿ.

"ಅಲ್ರೋ ಇಲ್ಲೇ ಅಲಿತಿದೀಯಾ 'ನ್ಯೂ ಡೆಲ್ಲಿ' ಅಂತಾ ಬುಲ್ಡಿ ಬಿಡ್ತೀಯಲ್ಲಾ" ...ಅಂದೆ.

"ಅಲ್ರೋ ಮಾರಾಯಾ...ಅದು ಕನ್ನಡ ಚಿತ್ರ ಕಣೊ ಈಗ ತಾನೆ ಪ್ರಟ್ಟಣ್ಣ ಕಣಗಾಲ್ ಥೇಟರ್‌ನಿಂದ ಹೊರಗೆ ಬರ್‍ತಾ ಇದೇನೆ" ಅಂತಾ ಮೈ ಕೈ ನೀವಿ ಕೊಳ್ಳುತ್ತಾ.

"ಮತ್ತೆ ಸಿನಿಮಾಗೆ ಹೋದರೆ ಸಂತೋಷವಾಗಿರಬೇಡವೇ—ಇದೇನು ಕುಸ್ತಿ ಆಡಿದೋರ ಹಾಗೆ ಕಾಣ್ತೆಯಲ್ಲಾ"...ಅಂದೆ.

"ಥೇಟರ್‌ನಲ್ಲಿ ಶೆಖೆ. ಸಿನಿಮಾದಲ್ಲಿ ಫೈಟಿಂಗ್. ಸುಸ್ತಾಗ್ದೆ ಇನ್ನೇನು?"

"ಚಿತ್ರ ಹೆಂಗಿತ್ತು?"

"ಏನು ಹೇಳೋದು ಗುರೂ ಪತ್ರಿಕೋದ್ಯಮದ ಬಗ್ಗೆ ಚಿತ್ರ ಮಾಡಬೇಕಾದರೆ, ಒಂದು ಪತ್ರಿಕೆ ಹೇಗೆ ಹೊರಗೆ ಬರುತ್ತೆ ಅನ್ನೋದಾದರೂ ಗೊತ್ತಿರಬೇಡವೆ ಡೈರೆಕ್ಟರ್ ಆದವನಿಗೆ. ಅಲ್ಲಯ್ಯಾ ಒಬ್ಬನೇ ವ್ಯಕ್ತಿ ರಾತ್ರೋರಾತ್ರಿ ಇಡೀ ಪತ್ರಿಕೆ ಹೊರಗೆ ತರ್‍ತಾನಲ್ಲಯ್ಯಾ" ಅಂತಾ ತಲೇ ಮೇಲೆ ಕೈ ಇಟ್ಟುಕೊಂಡ.

"ಹೌದೇ...ಚಿತ್ರದ ಕಥೆನಾದರೂ ಹೇಳಬಾರದೇ" ಅಂದೆ.

"ನೋಡಯ್ಯಾ ಈ ಫಿಲಂ ಹೀರೋ...ಅಲ್ಲಾ ಅಲ್ಲಾ"

"ಏಕಯ್ಯಾ ತಡವರಿಸ್ತಿಯಾ" ...

"ತಡವರಿಸಿರೋದು ನಾನಲ್ಲ ಆ ಚಿತ್ರದ ನಿರ್ದೇಶಕ ಮೊದಲು ಹೀರೊ (ಅಂಬರೀಶ್) ನ ಕಡೇಗೆ ಆಂಟಿ ಹೀರೊ ಆಗಿ ಮಾಡಿದಾನೆ.

"ಆಮೇಲೆ ಮುಂದುವರೆಸು ಕಥೆನಾ"... ಅಂತಾ ದಂ ಎಳೆದೆ.

"ತಡಿ ಮುಂದುವರಿಸ್ತೇನೆ" ಅಂತಾ ನನ್ನ ಜೇಬಿನಿಂದ ಸಿಗರೇಟ್ ತೆಗೆದು ಹೊತ್ತಿಸಿದ.

"ಹೀರೋಗೆ...ಅಲ್ಲಾ ಆ ಆಂಟಿ ಹೀರೋ ಒಬ್ಬ ಡ್ಯಾನ್ಸರ್ ಸ್ನೇಹ ಆಗತ್ತೆ–ರಾಜಕಾರಣಿಗಳಿಬ್ಬರು ಅವಳ ಮೇಲೆ ಅತ್ಯಾಚಾರ ಮಾಡ್ತಾರೆ–ಒಂದು ಒಳ್ಳೆ ವಿಷಯ ಅಂದರೆ ಅತ್ಯಾಚಾರದ ಚಿತ್ರೀಕರಣ ಅತಿಯಾಗಿ ತೋರಿಸದೇ ಇರೋದು."

"ವೆರಿಗುಡ್... ಆಮೇಲೆ"...ಎಂದೆ.

"ಈ ನಮ್ಮ ಆಂಟಿ ಹೀರೋ ಅದನ್ನ ಪತ್ರಿಕೆ ಮೂಲಕ ಬಯಲು ಮಾಡಲು ಪ್ರಯತ್ನಿಸಿದಾಗ_ಈ ರಾಜಕಾರಣಿಗಳು ತಮ್ಮ ಪ್ರಭಾವದಿಂದ ಅವನನ್ನ ಜೈಲಿಗೆ ಹಾಕಿಸುತ್ತಾರೆ. ಮೇಲಾಗಿ ಅವನ ತಲೆ ಕೆಟ್ಟಿದೆ ಅಂತಾ ಸಾಬೀತು ಪಡಿಸ್ತಾರೆ. ಅವನ ಬಲಗೈ ಬಲಗಾಲು ಮುರಿಯುತ್ತಾರೆ......"

"ಮುಗಿಸಯ್ಯಾ ಕಥೆನಾ"

"ನೋಡು ಯಾವುದಾದರೂ ಕಥೆ ಪ್ರಾರಂಭಿಸಿದರೆ ಅರ್ಧದಲ್ಲಿ ನಿಲ್ಲಿಸೊಲ್ಲಾ ಅಂತಾ ಗೊತ್ತಿಲ್ವೇ ?

"ಐದು ವರ್ಷ ಶಿಕ್ಷೆ ಆಗತ್ತೆ ನಮ್ಮ ಆಂಟಿ ಹೀರೋಗೆ. ಜೈಲಿನಲ್ಲಿ ಅವ ನಾಲ್ಕು ಜನ ಕುಖ್ಯಾತ ಕೇಡಿಗಳ ಸ್ನೇಹ ಬೆಳೆಸುತ್ತಾನೆ. ಹೊರ ಬಂದ ಮೇಲೆ ಅವನ ಫ್ರೆಂಡಿ (ಫ್ರೆಂಡ್‌ನ ಸ್ತ್ರೀಲಿಂಗ) ಒಂದು ಪೇಪರ್ ಹೊರಡಿಸುತ್ತಾಳೆ....ಅವಳಿಗೆ ದುಡ್ಡೆಲ್ಲಿಂದ ಬಂತೂ ಅಂತಾ ಕೇಳಬೇಡಾ. ಜಿ. ಕೆ. (ಅಂಬರೀಶ್) ಆ ಪತ್ರಿಕೆಗೆ ಪ್ರಧಾನ ಸಂಪಾದಕ ಆಗ್ತಾನೆ. ಇವನ ತಂಗಿ ಹಾಗೂ ಅವಳ ಸ್ನೇಹಿತ ಇಬ್ಬರೂ

ರಿಪೋರ್ಟರ್‌ಗಳಾಗಿ ಸೇರುತ್ತಾರೆ. ಜೀ. ಕೇ. ನೇ ತನ್ನ ಕೇಡಿ ಸ್ನೇಹಿತರಿಗೆ ತಪ್ಪಿಸಿಕೊಳ್ಳುವ ಮಾರ್ಗ ಹೇಳಿ ಕೊಡುತ್ತಾನೆ. ತಪ್ಪಿಸಿಕೊಂಡ ರೌಡಿಗಳು ಇವನಿಗೆ ಯಾರು ಬೇಕೋ ಅವರನ್ನೆಲ್ಲಾ ಕೊಲ್ಲುತ್ತಾರೆ. ಕಟ್ಟಕಡೆಗೆ ಜಿ. ಕೆ. ಅರೆಸ್ಟ್ ಆಗ್ತಾನೆ."

"ಚಿತ್ರದಲ್ಲಿನ ಬೆಸ್ಟ್ ಫೀಚರ್ ಏನು ಅಂತೀಯಾ ?"

"ಖಂಡಿತವಾಗಿ ಮ್ಯೂಸಿಕ್"

"ಅಷ್ಟು ಚೆನ್ನಾಗಿದೆಯೋ ಸಂಗೀತ ?"

"ಮ್ಯೂಸಿಕ್ಕೇ ಇಲ್ಲ ಕಣಯ್ಯ. ಅದೇ ಮೆಚ್ಚತಕ್ಕ ಅಂಶ. ಕ್ಯಾಮೆರಾ ವರ್ಕ್ ಚೆನ್ನಾಗಿದೆ. ಪಾರ್ಲಿಮೆಂಟು, ನೈನಿತಾಲ್, ಇಂಡಿಯಾ ಗೇಟ್ ನೋಡಲು ಸೊಗಸಾಗಿದೆ."

"ಇನ್ನು ಆಕ್ಟಿಂಗು"...

"ನಟೀರಿಬ್ರೂ" ತುಂಬಾ ಸಪ್ಪೆ. ಅಂಬರೀಶ್ ಮಾತೆಲ್ಲಾ ಬೋರ್. ಇದ್ದಿದ್ದರಲ್ಲಿ ಸಿಂಹ ಸೊಗಸಾಗಿ ಅಭಿನಯಿಸಿದ್ದಾರೆ".

"ಹಾಗಾದರೆ ಈ ಚಿತ್ರಕ್ಕೆ ನಿನ್ನ ರೇಟಿಂಗ್ ಏನು ಗುರೂ ?"

"ಫೇರ್" ಅಂತಂದು ಎಂಕ ಹೊರಟ. ನಾನು ಮನೆಗೆ ಬಂದೆ.




ದೂರವಾಣಿ : 608186
609026

ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
ಎಂಡ್ ಫೋಟೋ ಟೈಪ್ ಸೆಟರ್ಸ್

3/3, 1ನೇ ಮುಖ್ಯ ರಸ್ತೆ, ಹೊಸ ತರಗುಪೇಟೆ,
ಬೆಂಗಳೂರು 560002

REGISTERED No. BGW-180



Printed by V. R. NATH for the Publisher M. SHIVA KUMAR. Published and owned by M. SHIVA KUMAR, 36, 6th Main Road, Malleswarm, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Eiditor : M. SHIVA KUMAR.